# ವನವಾಣಿ

## ವಿಶೇಷ ಸಂಚಿಕೆ

## ಬೃಂದಾವನ 5ನೇ ವಾರ್ಷಿಕೋತ್ಸವ



WWW.BRINDAVANA.ORG

ಮೇ 2010

# Other agents provide quotes. I build custom plans.



**As a professional health plan advisor, I can offer you**

- Affordable health care solution
- Plans designed to meet your needs. Specialized in UnitedHealthcare and Oxford products
- Free cost and budget analysis of your current health plan

**Give me a call now and let me create an affordable health plan that meets your specific needs.**


**Contact information:**
Ben Kantharaju
50 Cragwood Road, Suite 321
South Plainfield, NJ 07080
Phone: 732-672-9844
E-mail: bkantha@gmail.com
Website: www.beekayonline.com


**Ben Kantharaju**

– Health, Life, Auto and Home Insurance
– Over 10 years serving South Asian community
– 5 years as top producer of UnitedHealthcare/Oxford

# ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ – ಬೃಂದಾವನ

## ಸಂಕೇತ ಗೀತೆ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ
ಮುನ್ನಡೆಯ ಕನ್ನಡದ ದಾರಿ ದೀವಿಗೆನೀಯೆ.

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ
ಕಾಮ ಕ್ರೋಧವನಳಿಸಿ ಕಾಪಾಡು ತಾಯೆ
ಒಂದಾದ ದೇಶದಲಿ ಹೊಂದಿ ಬಾಳದ ಸುತರ
ಹೊಸ ಬೆಸುಗೆಯಲಿ ಬಿಗಿದು ಒಂದುಗೂಡಿಸೆ ತಾಯೆ.

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ.

ಯಾವೆಣ್ಣೆಯಾದರೂ ಬೆಳಗುವುದೆ ಗುರಿಯೆಂಬ
ತತ್ವವನು ನೀನೆತ್ತಿ ತೋರು ಬಾ ತಾಯೆ
ಎದೆಯಂತರಾಳದಲಿ ಪುಟಿವ ಕಾರಂಜಿಯಲಿ
ಒಂದಾಗಿ ಕೂಗಲಿ ಕನ್ನಡ ಕನ್ನಡಾ.

ಕೃಪೆ: ಜಿ.ವಿ. ಅಯ್ಯರ್

# ಅಧ್ಯಕ್ಷರ ಸಂದೇಶ



ಎಲ್ಲರಿಗೂ ನಮಸ್ಕಾರ,

2004 ಮೇ ತಿಂಗಳ ಕೊನೆಯ ವಾರಾಂತ್ಯದಲ್ಲಿ ನಮ್ಮ ಮನೆ ''ಸಂತೃಪ್ತಿ'' ಯಲ್ಲಿ ಏನೋ ಸಡಗರ, ಸಂಭ್ರಮ...ನಮ್ಮ ಆಪ್ತ ಸ್ನೇಹಿತರ ಒಂದು ಗುಂಪೇ ನಮ್ಮ ಮನೆಯಲ್ಲಿ ನೆರೆದಿತ್ತು...ಕಾರಣ..ನಮ್ಮ ನ್ಯೂಜೆರ್ಸಿಯಲ್ಲಿ ಒಂದು ಕನ್ನಡ ಸಂಘವನ್ನು ಏಕೆ ಪ್ರಾರಂಭ ಮಾಡಬಾರದು ಎಂಬುದನ್ನು ಚರ್ಚಿಸಲು..ಅಂದು ಬಿತ್ತ ಬೀಜ, ಆರು ತಿಂಗಳಲ್ಲೇ ಡಿಸೆಂಬರ್ 5, 2004 ರಂದು ''ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ – ಬೃಂದಾವನ'' ಎಂಬ ಹೆಸರಿನಲ್ಲಿ ಒಂದು ಚಿಕ್ಕ ಕನ್ನಡ ಕೂಟದ ಜನನವಾಯಿತು. ಈ ಶಿಶುವನ್ನು ಪಾಲನೆ ಪೋಷಣೆ ಮಾಡಿ 4 ವರ್ಷದ ಪುಟ್ಟ ಕೂಸನ್ನಾಗಿ ಬೆಳಸಿ ಕೊಟ್ಟ ಸ್ಥಾಪಕ ಅಧ್ಯಕ್ಷರಾದ ಶ್ರೀ ಪ್ರಸನ್ನ ಕುಮಾರ್ ಹಾಗೂ ಅವರ ಸಮಿತಿಗೂ, ತದನಂತರ ಅಧ್ಯಕ್ಷೆಯಾದ ಶ್ರೀಮತಿ ವಸಂತ ಶಶಿ ಹಾಗೂ ಅವರ ಸಮಿತಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತ, ಐದರ ಹಸುಳೆ ನಮ್ಮ ಈ ''ಬೃಂದಾವನ''ದ ಸೇವೆಗೆ ಅವಕಾಶ ಮಾಡಿಕೊಟ್ಟ ನಿಮಗೆಲ್ಲ ವಂದಿಸುತ್ತ, ''ವನವಾಣಿ'' ಯಲ್ಲಿ ನನ್ನ ಈ ಪುಟ್ಟ ಸಂದೇಶವನ್ನು ಬರೆಯಲು ಇಚ್ಛಿಸುತ್ತೇನೆ.

2008 ರಲ್ಲಿ ಅಧ್ಯಕ್ಷರ ಸ್ಥಾನಕ್ಕೆ ನನ್ನ ಹೆಸರನ್ನು ನೋಡಿದಾಗ ನನಗೆ ಮೊದಲು ಅನಿಸಿದ್ದು ಇದು ನನಗೆ ಸಾಧ್ಯವೇ? ಅಂತ. ಆದರೆ ನೀವುಗಳೆಲ್ಲ ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಾನು ಚಿರಋಣಿ. ನಿಮ್ಮೆಲ್ಲರಿಗೂ ನಾನು ಕೃತಜ್ಞತೆ ಅರ್ಪಿಸಲು ಇಷ್ಟ ಪಡುತ್ತೇನೆ. ನನ್ನ ಹಾಗೂ ನನ್ನ ಯಜಮಾನರ ಕನಸು, ನಮ್ಮ ನ್ಯೂ ಜೆರ್ಸಿಯಲ್ಲಿರುವ ಎಲ್ಲಾ ಮಕ್ಕಳಿಗೂ ತಮ್ಮಲ್ಲಿರುವ ಕಲೆ ಹಾಗೂ ಪ್ರತಿಭೆ ಪ್ರದರ್ಶಿಸಲು ಒಂದು ವೇದಿಕೆಯನ್ನು ಸೃಷ್ಟಿಸಬೇಕು ಅನ್ನೋದು ಆಗಿತ್ತು. ದೇವರ ಕೃಪೆಯಿಂದ ಹಾಗೂ ನಿಮ್ಮೆಲ್ಲರ ಸಹಕಾರದಿಂದ ಅದು ಸಾಧ್ಯವಾಯಿತು. ಇದನ್ನು ಸಾಧ್ಯವಾಗಿಸಲು ಸಹಾಯ ಹಸ್ತ ನೀಡಿರುವ ನಮ್ಮ ಸ್ನೇಹಿತರು ಅಪಾರ, ಅವರಿಗೆಲ್ಲ ನಾನು ಚಿರಋಣಿ. ನಮ್ಮ ಈ ಸಂಘವು ಎಲ್ಲ ಕನ್ನಡಿಗರ ಮನೆ ಮಾತಾಗಬೇಕು ಅನ್ನೋ ಆಸೆ ಬಹಳ. ಎಲ್ಲರಿಗೂ, ಅದರಲ್ಲೂ ಎಲ್ಲಾ ಮಕ್ಕಳ ಮನಸ್ಸುಗಳಲ್ಲೂ ''ನಮ್ಮ ಪ್ರತಿಭೆ ಪ್ರದರ್ಶಿಸಲು ಬೃಂದಾವನ ನಮಗಾಗಿ ಸದಾ ಇದೆ'' ಅನ್ನೋ ಭರವಸೆ ತುಂಬುವುದೇ ನಮ್ಮ ಮುಖ್ಯ ಗುರಿಯಾಗಿತ್ತು.

ಈ ದಿನ ನಾನು ಏನಾದರೂ ಸಾಧಿಸಿದ್ದರೆ ಅದು ನಮ್ಮ ''ಸ್ಫೂರ್ತಿ'' ತಂಡದ ಪ್ರತಿಯೊಬ್ಬ ಸದಸ್ಯರು ನಿಸ್ವಾರ್ಥದಿಂದ ಸ್ವಯಂಸೇವಕರಾಗಿ ಸೇವೆ ಸಲ್ಲಿಸುತ್ತಿರುವುದರಿಂದ. ನಾವು ಇಷ್ಟು ಸಾಧನೆ ಮಾಡಲು ಸಾಧ್ಯವಾಗಿರುವುದು ನಮ್ಮ ಬೃಂದಾವನದ ಸದಸ್ಯರು ಎಲ್ಲ ಕಾರ್ಯಕ್ರಮಗಳಿಗೂ ಉತ್ತಮವಾದ ಪ್ರತಿಕ್ರಿಯೆ ತೋರಿಸಿದ್ದರಿಂದ ಎಂದು ಹೇಳಲು ಇಷ್ಟಪಡುತ್ತೇನೆ. ಈ ಒಂದೂವರೆ ವರ್ಷದಿಂದ ಬೃಂದಾವನ ಹಲವಾರು ಕಾರ್ಯಕ್ರಮಗಳನ್ನು ತನ್ನ ಸದಸ್ಯರಿಗೆ ಕೊಟ್ಟಿದೆ. ಮಕ್ಕಳಿಗೆ ಆದಷ್ಟು ಹೆಚ್ಚು ಅವಕಾಶ ಕೊಡುವುದು ನಮ್ಮ ಸ್ಫೂರ್ತಿ ತಂಡದ ಮುಖ್ಯ ಗುರಿಯಾಗಿತ್ತು. ಹಲವಾರು ಮಕ್ಕಳು ನಮ್ಮ ಬೃಂದಾವನದಲ್ಲಿ ಹಾಡಿ, ಕುಣಿದು ಸಂತೋಷ ಪಟ್ಟಿರುವುದು ಹೆಗ್ಗಳಿಕೆಯ ಮಾತು. ಆದರೆ ಇದಷ್ಟೇ ಸಾಧನೆ ಸಾಲದು, ಇನ್ನು ಹೆಚ್ಚು ಸಾಧಿಸಬೇಕು ಅನ್ನೋ ಆಸೆ ಹಾಗೂ ಛಲ ನಮ್ಮ ಸ್ಫೂರ್ತಿ ತಂಡದವರಿಗೆ ಬಲವಾಗಿ ಮೂಡಿತು. ಆ ಆಸೆ ಹಾಗೂ ಛಲದಿಂದ ಹುಟ್ಟಿದ್ದೇ ''ಬೃಂದಾವನದ ಆಶ್ರಯದಲ್ಲಿ ಆರನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ!''. ಇದು ಬೃಂದಾವನ ''ಸ್ಫೂರ್ತಿ'' ತಂಡದ ಹೆಗ್ಗಳಿಕೆಯ ವಿಚಾರವಾದರೂ, ಅದು ಸಾಧ್ಯವಾಗಲು ಕಾರಣರಾಗುತ್ತಿರುವವರು ನಮ್ಮ ಬೃಂದಾವನದ ಸದಸ್ಯರಲ್ಲದೆ, ನ್ಯೂಜೆರ್ಸಿ, ನ್ಯೂಯಾರ್ಕ್, ಪೆನ್ಸಿಲ್ವೇನಿಯ, ಡೆಲವೇರ್ ಹಾಗೂ ಕನೆಕ್ಟಿಕಟ್ ಗಳಲ್ಲಿ ನೆಲಸಿರುವ 400ಕ್ಕೂ ಹೆಚ್ಚುಮಂದಿ ಕನ್ನಡಿಗರು. ಅವರಿಗೆಲ್ಲ ನನ್ನ ಅನಂತಾನಂತ ವಂದನೆಗಳು ಹಾಗೂ ಹೃತ್ಪೂರ್ವಕ ಧನ್ಯವಾದಗಳು.

ಈಗ ನಡೆದುಕೊಂಡು ಬಂದಂತೆ, ಮುಂದೆಯೂ ನಮ್ಮ ಈ ಬೃಂದಾವನದಲ್ಲಿ ಸದಾಕಾಲ, ಸಹಾಯ ಕೇಳಿಕೊಂಡು ಬಂದವರಿಗೆ ತನ್ನ ತುಂಬು ಹೃದಯದಿಂದ ಸಹಾಯ ಮಾಡುತ್ತ, ನಮ್ಮ ಇಂದಿನ ಮಕ್ಕಳಿಗೆ ಎಲ್ಲಾ ರೀತಿಯಲ್ಲೂ ದಾರಿದೀಪವಾಗಿರಲಿ ಅಂತ ನಾನು ಹಾರೈಸುತ್ತೇನೆ. ''ಚಾರಿಟಬಲ್ ಸಂಸ್ಥೆ - 501 3(ಸಿ)'' ಎಂದು ನೋಂದಾಯಿಸಲು ಸಕಲ ಕಾರ್ಯಗಳು ಸಾಗುತ್ತಾ ಇದ್ದು, 2010ರಲ್ಲಿ ನೋಂದಾವಣೆ ಆಗುವ ಎಲ್ಲ ಸಾಧ್ಯತೆಗಳು ಇದೆ ಎಂಬುದು ನನ್ನ ಅನಿಸಿಕೆ.

ನಮ್ಮ ಹಾಗೂ ನಿಮ್ಮ ಈ ಬೃಂದಾವನ, 5 ವರುಷದ ಕೂಸು ನಿಜ. ಆದರೆ ಅದರಲ್ಲಿ ಎಂದೆಂದೂ ''ಸುಮಧುರ ಸ್ನೇಹ ಸಮ್ಮಿಲನ''ದ ವಾತಾವರಣವನ್ನು ಸದಾ ಕಾಲ ಕಾಪಾಡಿಕೊಂಡು ಬರಬೇಕು ಅನ್ನುವುದೇ ನನ್ನ ಆಸೆ. ಈ ನನ್ನ ಆಸೆಯನ್ನು ನೆರವೇರಿಸಲು ನಮ್ಮ ಸಂಸ್ಥೆಯಲ್ಲಿ ಹಲವಾರು ಪ್ರತಿಭಾವಂತ ಸದಸ್ಯರು ಇರುವುದು ಒಂದು ಹೆಮ್ಮೆಯ ವಿಷಯ.

''ಅಕ್ಕ'' ಸಮ್ಮೇಳನವನ್ನು ಸೆಪ್ಟಂಬರ್ ನಲ್ಲಿ ಯಶಸ್ವಿಯಾಗಿ ನಡೆಸಲೂ ಹಾಗೂ ಡಿಸೆಂಬರ್ 2010ರವರೆಗೆ ಈ ನಿಮ್ಮ ''ಬೃಂದಾವನದ'' ಜವಾಬ್ದಾರಿಯನ್ನು ಸಾಂಗವಾಗಿ ನೆರವೇರಿಸಲು ಈ ''ಸ್ಫೂರ್ತಿ'' ತಂಡಕ್ಕೆ ನಿಮ್ಮ ತುಂಬು ಹೃದಯದ ಬೆಂಬಲ ಹಾಗೂ ಸಹಕಾರವನ್ನು ಯಾಚಿಸುತ್ತ, ''ವನವಾಣಿ - ಐದನೇ ವಾರ್ಷಿಕೋತ್ಸವದ ವಿಶೇಷ ಸಂಚಿಕೆ''ಯನ್ನು ಇಷ್ಟೊಂದು ಸುಂದರವಾಗಿ ಹೊರತರಲು ಹಗಲಿರುಳೂ ಶ್ರಮಿಸಿದ ಸಂಪಾದಕ ಮಂಡಲಿ ಸದಸ್ಯರಿಗೂ ಹಾಗೂ ಜಾಹಿರಾತು ನೀಡಿರುವ ಎಲ್ಲರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತ, ಐದರ ಕೂಸು ''ಬೃಂದಾವನ'' ಕ್ಕೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರುವ

ಇಂತಿ ನಿಮ್ಮ
ಉಷ ಪ್ರಸನ್ನ ಕುಮಾರ್
ಅಧ್ಯಕ್ಷೆ
2008-10 ಕಾರ್ಯಕಾರಿ ಸಮಿತಿ (ಸ್ಫೂರ್ತಿ ತಂಡ)
ಸುಮಧುರ ಸ್ನೇಹ ಸಮ್ಮಿಲನ - ನಮ್ಮೀ ಬೃಂದಾವನ

*Proud Designer of this Brochure*

**aha** DESIGNS INC.

ART + DESIGN & MORE

## About Us

Aha Designs, Inc. is a unique, multifaceted design studio offering creative solutions, and excellent service at great prices. We provide ideas and designs that enable our clients to communicate their messages forcefully and memorably.

We pride ourselves on our flexibility and the ability to give each project that we undertake a personal touch. No project is too big or too small, the emphasis of our team is on delivering quality at all times.

Our goal is simple. To use our design expertise to make your business successful.








*creative expressions of originality*

1421B Oak Tree Road. Iselin, NJ 08830 | P: 732-325-1368 | C: 732-910-7473
www.ahadesignsinc.com | info@ahadesignsinc.com

# ಸಂಪಾದಕೀಯ



ಏಪ್ರಿಲ್ 17, 2010

ನ್ಯೂ ಜೆರ್ಸಿಯ ಕನ್ನಡಾಭಿಮಾನಿಗಳಿಗೆ ನನ್ನ ಗೌರವಪೂರ್ಣ ನಮಸ್ಕಾರಗಳು.

ನಿಮಗೆಲ್ಲರಿಗೂ ಈ ವರ್ಷದ ವಸಂತೋತ್ಸವ ಕಾರ್ಯಕ್ರಮಗಳಿಗೆ ಸ್ವಾಗತ ಮತ್ತು ಬೃಂದಾವನದ ಐದನೇ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು. ನಾವು ಬೃಂದಾವನದ ಐದನೇ ವರ್ಷದ ವಾರ್ಷಿಕೋತ್ಸವದ ಸಂಚಿಕೆ 'ವನವಾಣಿ'ಯನ್ನು ಬಹಳ ಹೆಮ್ಮೆಯಿಂದ ನಿಮ್ಮ ಮುಂದಿಡುತ್ತಿದ್ದೇವೆ. ಈ ವರ್ಷದ 'ವನವಾಣಿ' ಕಳೆದ ಐದು ವರ್ಷಗಳ ಕಾರ್ಯಕ್ರಮಗಳ ಚಿತ್ರ ಹಾಗೂ ಅನೇಕ ಲೇಖನಗಳನ್ನೊಳಗೊಂಡಿದೆ.

ಈ ವರ್ಷ ಬಹಳ ಮಹತ್ವಪೂರ್ಣವಾದುದು, ಕಳೆದ ನಾಲ್ಕೈದು ವರ್ಷಗಳಲ್ಲಿ ಬೃಂದಾವನ ನಡೆದು ಬಂದ ದಾರಿ ಹಾಗೂ ಈ ವರ್ಷದ ಮುಂಬರುವ ಕಾರ್ಯಕ್ರಮಗಳು ಒಂದು ಸಕ್ರಿಯ ಸಂಸ್ಥೆಯಾಗಿ ಬೃಂದಾವನದ ಕಂಪನ್ನು ಎಲ್ಲ ಕಡೆ ಹರಡಿವೆ. ಈ ಸಂಸ್ಥೆಯನ್ನು ಹುಟ್ಟು ಹಾಕಿದ ಹಿರಿಯರ ಉದ್ದೇಶ ಚಿರಂತನವಾದುದು, ಕಾರ್ಯಕಾರಿ ಸಮಿತಿ ಹಾಗೂ ''ಸ್ಫೂರ್ತಿ'' ತಂಡದ ಆಶಯಗಳ ಸ್ಫೂರ್ತಿ ಎಂದೂ ಬತ್ತದ ಚಿಲುಮೆ, ಜೊತೆಯಲ್ಲಿ ಬೃಂದಾವನದ ಸದಸ್ಯರ ಬೆಂಬಲ ಅಪಾರವಾದುದು.

ಡಿಸೆಂಬರ್ 5, 2004 ರಿಂದ ಹಿಡಿದು ಇಲ್ಲಿಯವರೆಗೆ ಬೃಂದಾವನದ ಸಕ್ರಿಯ ತಂಡ ತಮ್ಮನ್ನು ಒಂದಲ್ಲ ಒಂದು ರೀತಿಯಲ್ಲಿ ತೊಡಗಿಸಿಕೊಂಡು ದೇಶ ವಿದೇಶಗಳಲ್ಲಿ ಹೆಸರುಗಳಿಸಿರುವುದು ಬಹಳ ಹೆಮ್ಮೆಯ ವಿಷಯ. ಹಿರಿಕಿರಿಯರೆಲ್ಲರಿಗೂ ಅನ್ವಯವಾಗುವಂತೆ ವರ್ಷದುದ್ದಕ್ಕೂ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಾ, ಹಲವಾರು ದಾನಶೀಲ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾ ಹಾಗೂ ತಮ್ಮ ಒಡನಾಟಗಳನ್ನು ಸ್ಥಳೀಯ ನ್ಯೂ ಜೆರ್ಸಿ ಕನ್ನಡಿಗರಿಗೆ ಮಾತ್ರ ಸೀಮಿತವಾಗಿರಿಸದೇ ನೆರೆಯ ರಾಜ್ಯಗಳಲ್ಲಿನ ಕನ್ನಡಿಗರೊಂದಿಗೂ ಬೆರೆಯುವುದರಲ್ಲಿ ಬೃಂದಾವನದ ಸದಸ್ಯರು ವಿಶೇಷವಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಸುಮಾರು ನಾಲ್ಕು ದಶಕಗಳಿಗೂ ಹೆಚ್ಚು ಇತಿಹಾಸವಿರುವ ಉತ್ತರ ಅಮೇರಿಕದ ಕನ್ನಡದ ಸಂಘಗಳಲ್ಲಿ ಇನ್ನೂ ಈಗಷ್ಟೇ ಅಂಬೆಗಾಲಿಡುತ್ತಿರುವ ಹಸುಗೂಸು ಈ ವರ್ಷದ ಆರನೇ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸುವ ಜವಾಬ್ದಾರಿಯನ್ನು ಕೈಗೆತ್ತಿಕೊಂಡಿರುವುದು ಬಹಳ ಮಹತ್ವದ ಮೈಲಿಗಲ್ಲು.

ಈ ಸಂಚಿಕೆಯನ್ನು ಹೊರತರಲು ನಮಗೆ ಅವಕಾಶ ಮಾಡಿಕೊಟ್ಟ ಬೃಂದಾವನ ಕಾರ್ಯಕಾರಿ ಸಮಿತಿಗೆ ನಮ್ಮ ವಂದನೆಗಳು. ನಮಗೆ ಲೇಖನಗಳನ್ನು ಸಕಾಲದಲ್ಲಿ ತಲುಪಿಸಿ ಈ ಸ್ಮರಣ ಸಂಚಿಕೆಯನ್ನು ಪ್ರಕಟಿಸಲು ಸಹಾಯ ಮಾಡಿದ ಲೇಖಕರಿಗೆ ಮತ್ತು ಈ ಸಂಚಿಕೆಯಲ್ಲಿ ಪ್ರಕಟಿಸಲು ಜಾಹೀರಾತುಗಳನ್ನು, ಸಂದೇಶಗಳನ್ನು ಕೊಡುವುದರ ಮೂಲಕ ಹಣ ಸಹಾಯ ಮಾಡಿದವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಹಾಗೆಯೇ ಈ ಸಂಚಿಕೆಯಲ್ಲಿ ಛಾಯಾಚಿತ್ರಗಳನ್ನು ಪ್ರಕಟಿಸಲು ಸಹಾಯಮಾಡಿದ ಶ್ರೀ ರಘು ಮೂರ್ತಿ, ಶ್ರೀ ಬೆನ್ ಕಾಂತರಾಜು, ಶ್ರೀ ಸಂತೋಷ್ ಕಡಲೆಬೇಳೆಯವರಿಗೆ ಹಾಗೂ ಶ್ರೀಮತಿ ಉಷಾ ಮತ್ತು ಶ್ರೀ ಪ್ರಸನ್ನ ಕುಮಾರ್ ಅವರಿಗೆ ನಮ್ಮ ವಂದನೆಗಳು.

ಈ ಸಂಚಿಕೆಯನ್ನು ಮುದ್ರಿಸುವ ಜವಾಬ್ದಾರಿಯನ್ನು ವಹಿಸಿಕೊಂಡು ನಮ್ಮ ಜೊತೆ ಸಹಕರಿಸಿ ಸಹಾಯ ಮಾಡಿದ ''ಆಹಾ! ಡಿಸೈನ್ಸ್''ನ ಶ್ರೀ ನಿಮಿಷ್ ಕಡಾಕಿಯ ಅವರಿಗೆ ನಮ್ಮ ಅನಂತ ವಂದನೆಗಳು.

ತಮಗೆಲ್ಲ ವಿಕೃತಿ ನಾಮ ಸಂವತ್ಸರ ಒಳಿತನ್ನು ತರಲಿ, ಹೃದಯಪೂರ್ವ ಧನ್ಯವಾದಗಳು.

ಸತೀಶ್ ಹೊಸನಗರ
ಪ್ರಧಾನ ಸಂಪಾದಕರು
ಬೃಂದಾವನ – ಐದನೇ ವಾರ್ಷಿಕೋತ್ಸವ ಸಂಚಿಕೆ

## ಸಂಪಾದಕ ಮಂಡಳಿ:

ಸತೀಶ್ ಹೊಸನಗರ,
ಮೀರಾ ಪಿ.ಆರ್.,
ದಾಶರಥಿ ಗಟ್ಟು,
ಲಕ್ಷ್ಮೀಶ್ ಸೀಗೇಹಳ್ಳಿ,
ಶೈಲಾ ಪಾಟಂಕರ್,
ಅಶೋಕ್ ಕಟ್ಟಿಮನಿ,
ರುದ್ರ ಕುಮಾರ್



# Board of Directors



**Usha Prasannakumar**
President



**Dr. Ram Bangalore**
Vice President



**Madhu Rangaiah**
Secretary



**Seema Murthy**
Treasurer



**Ben Kantharaju**
Director, Fund Raising

# Board of Directors



**Sadhana Shankar**
Director, Hospitality



**Simhadri Santhebennur**
Director, Cultural Committee



**Merlin Mendoca**
Honorary Director



**Raghavendra Murthy**
Honorary Director



**Santosh Kumar Kadlebele**
Honorary Director

# ಒಂದು ಸೌಟು ಸಾರು

## ದಾಶರಥಿ ಗಟ್ಟು



ನಾನು ಎಂದಾದರೂ ಏನನ್ನಾದರೂ ಬರೆಯಲು ಪ್ರಾರಂಭಿಸಿದರೆ ಆ ಮುದುಕಿಯ ಬಗ್ಗೆ ಮೊದಲು ಬರೆಯಬೇಕೆಂದು ತೀರ್ಮಾನಿಸಿದ್ದೆ. ನನ್ನ ಬಾಲ್ಯದಲ್ಲಿ ಆಗ ಈಗ ನಮ್ಮ ಮನೆಯ ಮುಂದೆ ಬಂದು ನಿಂತಿರುತ್ತಿದ್ದ ಅವಳು, ಜೀವನವಿಡೀ ನನ್ನ ಪ್ರಜ್ಞೆಯನ್ನು ಕಾಡುತ್ತಿರುತ್ತಾಳೆಂದು ನಾನು ಭಾವಿಸಿರಲೇ ಇಲ್ಲ.

ದಳಸನೂರು ನಮ್ಮೂರಿನ ಹೆಸರು. ವಿಶೇಷ ವೈವಿಧ್ಯತೆಗಳೇನೂ ಇಲ್ಲದ ಭಾರತದಲ್ಲಿರುವ ಅಸಂಖ್ಯಾತ ಹಳ್ಳಿಗಳಲ್ಲಿ ಇದೂ ಒಂದು ಸಣ್ಣ ಹಳ್ಳಿ. ಆದರೆ ಈ ಪ್ರಪಂಚಕ್ಕೆ ನನ್ನ ಕಣ್ಣು ತೆರೆಸಿದ, ಬಾಲ್ಯದಲ್ಲಿ ನನ್ನನ್ನು ಪೊರೆದ ಮತ್ತು ನನ್ನ ಬಾಲ್ಯದ ನನಸು ಕನಸುಗಳನ್ನು ಕಟ್ಟಿಕೊಟ್ಟ ಪರಿಸರ ಇದು. ಊರಿನ ಪೂರ್ವಕ್ಕೆ ಸಣ್ಣ ಕೆರೆ ಮತ್ತು ನೀರು ಪೂರೈಸುವ ಕುಂಟೆ. ಸುತ್ತಲೂ ಅಲ್ಲಲ್ಲಿ ಸಣ್ಣ ಕುಂಟೆ ಮತ್ತು ಬಾವಿಗಳು. ಹುಣಿಸೆ, ಅರಳಿ, ಬೇವು ಮತ್ತು ಮಾವಿನ ಮರಗಳು. ರಾಗಿ ಮತ್ತು ಅವರೆ ಹೊಲಗಳು. ಹೊಲಗಳಿಲ್ಲದ ಬರಡು ಭೂಮಿಯಲ್ಲಿ ಬೆಳೆದ ಕುರುಚಲು ಪೊದೆಗಳು. ಬೇಸಿಗೆಯ ಬಿರು ಬಿಸಿಲು ಮತ್ತು ಅಪರೂಪಕ್ಕೆ ಬರುವ ಮಳೆಗಾಲದ ಕೆಸರು ರಸ್ತೆಗಳು ನಮ್ಮೂರನ್ನು ನೆನೆಸಿಕೊಂಡಾಗಲೆಲ್ಲ ನನ್ನ ಮುಂದೆ ಬರುವ ಚಿತ್ರ.

ಊರಿನ ಮಧ್ಯೆ ಒಂದು ದೇವಸ್ಥಾನ. ಆದರ ಮುಂದೆ ಹಾದು ಹೋಗುವುದೇ ಊರಿನ ಅದೃಷ್ಟಕ್ಕೆ ಇನ್ನೂ ಹೆಸರಿಟ್ಟಿಲ್ಲದ ಮುಖ್ಯ ರಸ್ತೆ. ಆ ರಸ್ತೆಯಲ್ಲಿ ನಮ್ಮ ಮನೆ.

ವಿದ್ಯುತ್ ದೀಪಗಳಿಲ್ಲದ ಆ ದಿನಗಳಲ್ಲಿ ಹಿರಿಯರಿಗೆ ಹೆದರಿ, ಚಿಮಣಿ ಬೆಳಕಿನಲ್ಲಿ ಯಾವುದೋ ಪುಸ್ತಕವನ್ನು ಮುಂದಿಟ್ಟುಕೊಂಡು ಗಂಟಲು ಹರಿಯುವ ದನಿಯಲ್ಲಿ ಓದುತ್ತಿದ್ದೆ. ''ಆಮ್ಮಾ'' ಎನ್ನುವ ದನಿ ಬಾಗಿಲ ಮುಂದಿನ ರಸ್ತೆಯಿಂದ ಕೇಳಿಸಿತು. ''ಯಾರೋ ಅದು ನೋಡೋ'' ಎಂಬ ದನಿ ಕೇಳಿದ್ದೇ, ಪುಸ್ತಕ ಬಿಸಾಡಿ, ಮುಂಬಾಗಿಲಿಗೆ ಓಡಿದಾಗ ಕಂಡದ್ದು ಒಂದು ತುಂಡು ಬಟ್ಟೆಯುಟ್ಟ, ಇಡೀ ತಲೆಗೂದಲು ಬೆಳ್ಳಗಾದ ಮುದುಕಿ. ಲಾಂದ್ರದ ಮಂಕು ಬೆಳಕಲ್ಲಿ ಜೀರ್ಣ ದೇಹದ ಅವಳು ಹೆಪ್ಪುಗಟ್ಟಿದ ಕತ್ತಲಿನ ತುಂಡೋ ಎನ್ನುವಂತೆ ಅಲ್ಲಿ ನಿಂತಿದ್ದಳು. ಆಷ್ಟರಲ್ಲಿ ನಮ್ಮ ಅಜ್ಜಿ ನನ್ನ ಹಿಂದೆ ಬಂದು ನಿಂತಳು.

ನನ್ನ ಅಜ್ಜಿಯನ್ನು ನೋಡಿದ ಅವಳಿಗೆ, ತನ್ನದೇ ವಯಸ್ಸಿನ ವ್ಯಕ್ತಿಯೊಂದಿಗೆ ಸಂವಹನ ಸುಲಭವಾಗುತ್ತೆಂದೆನಿಸಿತೇನೋ? ನನ್ನನ್ನು ಅಲಕ್ಷಿಸಿ ಅಮ್ಮ ಗೊಂತಪಗ್ಗಾಲು ಕಾವಾಲಾ? ಎಂದು ತೆಲುಗಿನಲ್ಲಿ ಕೇಳಿದಳು. ಬೇಡವೆಂದರೂ ಕೇಳದೆ, ದನದ ಕೊರಳ ಹಗ್ಗ (ಗೊಂತಪಗ್ಗಾಲು) ಹೊಸೆದು ತಂದಿದ್ದೇನೆ, ಅದನ್ನು ತೆಗೆದುಕೊಂಡು ಸ್ವಲ್ಪ ಸಾರು ಕೊಡಿ, ನನಗೆ ಮೈ ಹುಷಾರಿಲ್ಲದೆ ಬಾಯ ರುಚಿ ಕೆಟ್ಟಿದೆಯೆಂದು ಪದೇ ಪದೇ ಹೇಳುತ್ತಿದ್ದಳು. ಅವಳು ಸಾರಿಗಾಗಿ ಬೇಡುತ್ತಿರುವ ಪರಿಯನ್ನೂ, ಅಜ್ಜಿ ಅದೇ ಸಾರಿಗಾಗಿ ತೋರುತ್ತಿರುವ ಜಿಪುಣತನವನ್ನೂ ವಿಸ್ಮಯದಿಂದ ನೋಡುತ್ತಾ ನಾನು ಅಲ್ಲೇ ನಿಂತಿದ್ದೆ. ಆವತ್ತು ಅಜ್ಜಿ ಕತ್ತಾಳೆ ನಾರಿನಿಂದ ಮಾಡಿದ ಆ ಹಗ್ಗಗಳನ್ನು ತೆಗೆದುಕೊಂಡಳೋ, ಅದಕ್ಕೆ ಬದಲಾಗಿ ಸಾರೋ ಅಥವಾ ಇನ್ನಿತರ ಯಾವುದಾದರೂ ವ್ಯಂಜನವನ್ನು ಕೊಟ್ಟಳೋ, ಇಲ್ಲವೋ ನನಗೆ ನೆನಪಿಲ್ಲ.

ಆದಾದ ಮೇಲೆ ಪ್ರತಿದಿನ, ಸ್ಕೂಲು ಮುಗಿಸಿಕೊಂಡು, ಮನೆಗೆ ಬಂದು ನಮ್ಮ ಹೊಲಗಳಿಗೆ ಹೋಗುವಾಗ ಆ ಮುದುಕಿಯನ್ನು ದಾರಿಯಲ್ಲಿದ್ದ ಒಂದು ಗಾಣಿಗರ ಮನೆಯ ಮುಂದೆ ನೋಡುತ್ತಿದ್ದೆ. ಇದ್ದ ಐದಾರು ಗಾಣಿಗರ ಮನೆಗಳಲ್ಲಿ ಅವಳ ಮನೆಯೇ ಅತ್ಯಂತ ಜೀರ್ಣಾವಸ್ಥೆಯಲ್ಲಿದ್ದದ್ದು. ಆ ಮನೆಯ ಮುಂದಿನ ಬಯಲಿನಲ್ಲಿ ಒಂದು ಎಣ್ಣೆ ತೆಗೆಯುವ ಗಾಣ ಪ್ರಾಗೈತಿಹಾಸಿಕ ಪಳೆಯುಳಿಕೆಯಂತೆ ನಿಂತಿತ್ತು. ಅವಳ ಮಕ್ಕಳು ಮರಿ ಏನು ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. ಯಾವುದೇ ಹಳ್ಳಿಯ ಈ ಸ್ತರದ ಭೂರಹಿತರೆಲ್ಲರೂ ಮಾಡುವಂತೆ, ಇವರೂ ಸಿಕ್ಕಾಗ ಕೂಲಿ ನಾಲಿ ಮಾಡುತ್ತಿದ್ದುದಂತೂ ನಿಜ. ಆದರೆ ಈ ಮುದುಕಿ ಮಾತ್ರ ಬದಲಾದ ಸಾಮಾಜಿಕ ಅವಶ್ಯಕತೆಗಳಲ್ಲಿ ನಿರುಪಯುಕ್ತವಾದ ಗಾಣದ ವಿಸ್ತರಣೆಯೋ ಎಂಬಂತೆ, ಮನೆಯ ಮುಂದೆ ಬೆಳೆದಿದ್ದ ಒಂದು ಹುಣಿಸೆ ಮರದ ಕೆಳಗೆ ಆ ಗಾಣವನ್ನೇ ನಿಟ್ಟಿಸುತ್ತಲೋ, ಕತ್ತಾಳೆ ನಾರಿನ ಹಗ್ಗ ಹೊಸೆಯುತ್ತಲೋ ಕುಳಿತಿರುತ್ತಿದ್ದಳು.

ನನ್ನ ಅಜ್ಜಿಯ ಜೊತೆ ಮಾತನಾಡಿದ್ದನ್ನು ಬಿಟ್ಟರೆ ಅವಳು ಯಾರ ಜೊತೆಯಲ್ಲಾಗಲೀ ಮಾತನಾಡಿದ್ದನ್ನೋ, ಅಥವಾ ಯಾರ ಕಡೆಗಾದರೂ ನೋಡಿ ನಕ್ಕಿದ್ದನ್ನೋ ನಾನು ನೋಡಿಲ್ಲ. ಅವಳ ಹೆಸರೇನೆಂದು ತಿಳಿದುಕೊಳ್ಳುವ ಕುತೂಹಲವನ್ನು ಯಾರಾದರೂ ತೋರಿಸಿರುವುದನ್ನೂ ನಾನು ಕಾಣೆ. ನಮ್ಮ ಮನೆಯ ಎಲ್ಲರಿಗೂ ಅವಳು ಬರೀ ಗೊಂತಪಗ್ಗಾಲು. ಅವಳು ಬಂದು ಮನೆ ಮುಂದೆ ನಿಂತ ತಕ್ಷಣ, ನಾನು ''ಅಮ್ಮಾ, ಗೊಂತುಪಗ್ಗಾಲು ಬಂದಳು'' ಎಂದೇ ಕಿರಿಚುತ್ತಿದ್ದೆ.

ಅವಳು ಊರೊಳಗೆ ಬರುತ್ತಿದ್ದುದೇ ಹಸಿವೋ ಅರುಚಿಯೋ ಆದಾಗ, ತಾನು ಹೊಸೆದ ಹಗ್ಗಗಳನ್ನು ಹಿಡಿದುಕೊಂಡು. ಅದೂ ಮಂಕು ದೀಪಗಳ ಬೆಳಕಿನ ರಾತ್ರಿ ಕತ್ತಲಿನಲ್ಲಿ. ಬೆಳಕೇ ನಂದಿಹೋದ ತನ್ನ ಜೀವನದಲ್ಲಿ, ಎಲ್ಲ ರೀತಿಯ ಬೆಳಕಿಗೂ ಅಗಮ್ಯವಾಗಿ ಅವಳು ಜೀವಿಸುತ್ತಿದ್ದಳೆಂದೆನಿಸುತ್ತದೆ.

ಮನೆಯ ಮುಂದಿನ ರಸ್ತೆಯ ಕತ್ತಲಿನಿಂದ ''ಅಮ್ಮಾ, ಗೊಂತಪಗ್ಗಾಲು'' ಎಂಬ ದನಿ ಕೇಳಿದಾಗ, ಮೊದ ಮೊದಲು, ಮನೆಯವರನ್ನು ಮೆಚ್ಚಿಸಲು ಶರವೇಗದಿಂದ ಓಡಿ, ನನ್ನ ತಲೆಯಲ್ಲಿ ತುರುಕಿದ್ದ ವೈದಿಕ ಔನ್ನತ್ಯದ ಐಡಿಯಗಳಿಂದ ಅವಳನ್ನು ಹೀನವಾಗಿ ನೋಡಿ ಓಡಿಸಲು ಪ್ರಯತ್ನಿಸುತ್ತಿದ್ದೆ. ಆದರೆ ಅವಳು ನಮ್ಮಜ್ಜಿ ಬರುವವರೆಗೂ ಅಲ್ಲಿಂದ ಕದಲುತ್ತಿರಲಿಲ್ಲ. ನನ್ನನ್ನು ಮಾತಾಡಿಸುತ್ತಲೂ ಇರಲಿಲ್ಲ, ನನ್ನ ಕಿರಿಚಾಟಕ್ಕೆ ಪ್ರತಿಕ್ರಿಯಸುತ್ತಲೂ ಇರಲಿಲ್ಲ.

ಆಜ್ಜಿ ಕೆಲವು ಸಲ ಅವಳ ಅಹವಾಲನ್ನು ಸಮಾಧಾನದಿಂದಲೇ ಕೇಳಿ, ತಂದ ಹಗ್ಗದ ಬದಲು ಅವಳು ಕೇಳುತ್ತಿದ್ದ  ಸಾರನ್ನೋ ಹುಳಿಯನ್ನೋ ಕೊಡುವಂತೆ ನಮ್ಮಮ್ಮನಿಗೆ ಹೇಳುತ್ತಿದ್ದಳು. ಮತ್ತೆ ಕೆಲವು ಸಲ ಅವಳನ್ನು ಬೈದು ಅಟ್ಟುತ್ತಿದ್ದಳು. ಮೇಲಾಗಿ ಪ್ರತಿದಿನ ಹಗ್ಗಗಳನ್ನು ಕೊಳ್ಳಲು ಅದೇನೂ ದನಗಳ ಆಹಾರವಾಗಿರಲಿಲ್ಲವಲ್ಲ.

ಊರಲ್ಲಿದ್ದಷ್ಟು ದಿನ ಅವಳಿದ್ದಾಳೊ ಇಲ್ಲವೋ ಎಂಬುದರ ಬಗ್ಗೆ ನಾನೇನೂ ಯೋಚಿಸಿರಲಿಲ್ಲ. ಬೆಳೆದು ದೊಡ್ಡವನಾಗಿ, ಸಂಸಾರ ಕಟ್ಟಿಕೊಂಡು ದಶಕಗಳಿಂದ ಊರೂರು ಸುತ್ತುತ್ತಿರುವ ನಾನು ಅವಳ ಬಗ್ಗೆ ಈಗ ಯೋಚಿಸಲು ಅವಳೇನೂ ನನ್ನ ಪ್ರೀತಿಯ ನೆಂಟಳೂ ಅಲ್ಲ. ಆದರೂ ಉಳಿದ ಸಾರನ್ನೊ, ಹುಳಿಯನ್ನೊ ಅಥವಾ ಇನ್ನಿತರ ವ್ಯಂಜನಗಳನ್ನೋ ಸಿಂಕಿಗೆ ಸುರಿಯುವಾಗ ಅವಳ ಮುಖ ಥುತ್ತನೆ ನೆನಪಾಗುತ್ತದೆ. ಒಂದು ಸೌಟು ಪದಾರ್ಥಕ್ಕಾಗಿ ಮನೆಯ ಮುಂದೆ ನಿಲ್ಲುತ್ತಿದ್ದ ಅವಳ ಆರ್ತತೆ ಮತ್ತು ತನಗೆ ಬರುವ  ಒಂದೇ ಗುಡಿಗಾರಿಕೆಯು ತನ್ನ ನಿಕೃಷ್ಟ ಅವಶ್ಯಕತೆಯನ್ನೂ ಪೂರೈಸಲಾಗದ ಅವಳ ಅಸಹಾಯಕತೆಗಳ ನೆನಪು ನನ್ನನ್ನು ವಿಷಣ್ಣನನ್ನಾಗಿ ಮಾಡುತ್ತದೆ. ಅವಳಂತಹ ಅಸಂಖ್ಯಾತ ಜೀವಗಳ ನೋವು, ಅಸಹಾಯಕತೆ ಮತ್ತು ಇಡೀ ಜೀವನದ ಗೆಲುವಿಲ್ಲದ ಹೋರಾಟಗಳ ಮುಂದೆ, ನಮ್ಮ ದೈನಂದಿನ ತಲ್ಲಣಗಳೂ, ಕಲ್ಪಿತ ಕಷ್ಟ ನಷ್ಟಗಳೂ ಪೊಳ್ಳು ಎನಿಸುತ್ತದೆ.

ಮನೆಯಲ್ಲಿ ಉಳಿಯುವ ಎಲ್ಲಾ ಪದಾರ್ಥಗಳನ್ನೂ ನಾನೀಗ ಅವಳಿಗೆ ಕೊಡಬೇಕು ಎಂದುಕೊಳ್ಳುತ್ತೇನೆ. ಆದರೆ  ನಾನು ದನಗಳನ್ನು ಸಾಕುತ್ತಿಲ್ಲ. ನನಗೆ ದನದ ಕೊರಳ ಹಗ್ಗಗಳ ಅವಶ್ಯಕತೆಯೇ ಇಲ್ಲ. ಅವಳಿಗೆ ಹಗ್ಗ ಹೊಸೆಯುವುದನ್ನು ಬಿಟ್ಟು ಬೇರೇನೂ ಬರುವುದಿಲ್ಲ. ವೈಯುಕ್ತಿಕ ಘನತೆಯೇ ಆಸ್ತಿಯಾಗಿರುವ ಆ ಧೀಮಂತ ಹೆಣ್ಣು ಭಿಕ್ಷೆ ಬೇಡುವುದನ್ನು ಕಲಿತಿಲ್ಲ. ಇನ್ನು ಹೇಗಾದರೂ ಅವಳಿಗೆ ಏನನ್ನಾದರೂ ನಾವು ಕೊಡಲು ಸಾಧ್ಯ?

ಮೇಲಾಗಿ ಅವಳೇ ಈಗ ಈ ಲೋಕದಲ್ಲಿಲ್ಲ.

# *Facebook: time to reconsider how you consider it*

*- Amulya Kattimani*



Think about the one website 9 out of 10 of us never fail to log in to. The one website that connects all of us together, and has led to the radical thinking, that if someone is not part of this website, he or she is socially inactive. Considered a huge offense to not be part of it, this website can suck you for hours and days together, eat your time without the slightest notice, create permanent rifts in relationships and disturb one's mind greatly. If you haven't guessed it yet, it is none other than networking website of Facebook.

I have been part of the Facebook phenomenon for three years now. I like it, undoubtedly, and will most likely continue to be part of it throughout my life. I have heard many stories where people who hadn't seen each other for decades finally got in contact through Facebook. If so, why I am making such hostile claims against it? Why am I reconsidering how I consider Facebook?

Remember the days when a friend would actually qualify the requirements of being a friend ... when friendship did not just mean being in a picture together and receiving loads of "comments" on it...when birthdays were remembered as special days of special people you know instead of mere dates that popped up as "notifications"... when getting into a relationship was for intimate reasons rather than only to demonstrate showmanship...in all, when what you said or did, actually meant the same.

Incidentally, due to excessive deficiency in time-management skills, my father recommended me a workshop. As I was taking its diagnostic test, I was taken aback to discover that I spend a cumulative time of at least 3 hours on Facebook every week. This time, which I could rather use for any more productive work, I simply spend on logging on Facebook—stalking random people, going through others' pictures and making my life more public. Although I do agree that Facebook helps keep in touch with faraway friends and family and reach those that are long lost, I strongly claim that it has become more of a fashion and addiction and lost its sense of purpose.

Reports show that gone are the days when dot-com games and blogging websites were the most popular websites. According to Neilson Company's report in June of last year, Facebook was found to be the highest man-time consumer among all other websites, including Google, Yahoo and e-bay - averaging 4 hours and 39 minutes spent by each of its 87 million users, in any one month. While that average time excludes extremes and fails to bring into limelight, some other facebook - freaks who could spend all weekend only anticipating new 'notifications', logging on Facebook every other hour, or in fact not logging out at all, it still hints only at the time factor of Facebook's effects in our lives. The psychological effects, on the other hand, which go rather unnoticed, are tremendous.

A survey I took casually, among friends can be no better proof to this. More than 80% of them said it would affect them, even if just for a bit, if nobody commented on their new profile picture which they changed after a really long time. About 75% said that they would take it seriously if they did not have any new 'wall posts' for over a month. Almost all of them agreed that the number of pictures and comments one had determined his or her level of popularity. Nothing shocked me more, when one of my friends met this guy at a party and although they seemed to be getting along pretty well, her impression of him completely changed when she went through his facebook profile and looked through his pictures and comments. It was amazing how a page on the web could talk someone's personality and decide if the person was 'it' or not.

Besides the emotional effects of Facebook, consider the extent of privacy that has been lost, or more appropriately, the amount of private affairs that has been made public through Facebook. A relationship is not official until it is updated on Facebook. Everyone knows exactly when and where, who all are meeting up the Friday after Finals. They even know what they all are going to be eating. A party is not a hit if loads of pictures of it are not uploaded. Updating 'what's on your mind' is cool and necessary. How much of your life do you really want to make public?

# Sports in India

-Ashwin Murthy

Bridgewater-Raritan High School



One common stereotype is that Indians are solely focused on school and academics and they do not engage in extracurricular activities such as sports. This is not true at all. I, myself, love sports and play basketball and tennis. Some people say, that is only because I live here in the U.S. But they would be surprised about all the different sports we play in India.

Without doubt the most common sport in India, cricket is loved by children of all ages. Most Indians are familiar with how it is played, a relatively simple bat and ball game. Kids capitalize on any opportunity given to go out and play. Many who have not been to India would be surprised at the extremes people take to play the game. No matter what the weather, the time, the number of people, or even when there is absolutely no space, these kids find a way to play the game. They are also very good in the game, from hours upon hours of practice. Many of these children cannot afford real equipment either, and they pool money and make the most of whatever they can get.

Another sport that many Indians love is football, known in America as soccer. This sport is a great pastime because it requires little equipment. A relatively inexpensive ball is kicked around and can be played almost anywhere. This is perfect for the itinerant lifestyle of teens in India. It also makes them run around a lot, which is fun for kids anywhere.

In addition to being a favorite pastime, sports have become a part of Indian culture. Cricket players are often found in advertisements for things like candy bars and telephone companies. Sports have also provided an opening to corporations such as Nike and Reebok. Many people enjoy attending cricket matches and fans become very animated at times, especially when they are playing rival teams. India's national cricket team is among the greatest in the world and the people take great pride in it. All in all, sports are a very important part of Indian life as a pastime and as a part of everyday culture.

# *Modern* ಬದುಕು

ದೀಪಾ ಬೆಳಗೋಡ್



ಕಿವಿಗೆ **ipod,**
ಕೈಗೆ **computer-touchpad,**
ದಿನಸಿ ಸಾಮಾನಿಗೆ **peapod,**
ಆದರೂ ಏನಿದು ನಮ್ಮ ಪಾಡು,
ಭಗವಂತ ಕಾಪಾಡು!!!

**return policy** ಇದೆಯೆಂದು,
ಕಂಡಿದ್ದೆಲ್ಲಾ ಕೊಂಡಾಯ್ತು.
ತಿಂಗಳ **bill** ಬಂದಾಗ,
**heart beat** ಮಿಸ್ಸಾಯ್ತು.
ಆಗ, ಬೇಡದ್ದೆಲ್ಲಾ ಹೋಗಿ,
ವಾಪಸ್ಸು ಮಾಡುವಲ್ಲಿ ಸುಸ್ತಾಯ್ತು.

ಅದು ಬೇಕು, ಇದು ಬೇಕು, ಎಲ್ಲಾ......ಬೇಕು.
ಎಲ್ಲಾದಕ್ಕೂ.....**deals** ಹುಡುಕಬೇಕು.
**research/reviews** ನೋಡಬೇಕು.
ನೂರಾರು **emails**ಗೆ **reply** ಮಾಡಬೇಕು.
ಹಾಗಾದರೆ, **office**ನಲ್ಲಿ ಕೆಲಸ ಯಾವಾಗ ಮಾಡಬೇಕು?

ಬಯಸಿದ್ದೆಲ್ಲಾ **sale**ನಲ್ಲಿ ಕೊಂಡಾಯ್ತು.
**manual** ಓದಿ ಓದಿ ಎಲ್ಲಾ ಕಲಿತಾಯ್ತು.
ಸೌಕರ್ಯವೇನೋ ಜಾಸ್ತಿಯಾಯ್ತು.
ಜೊತೆಗೆ ಕೆಲಸಾನೂ ಜಾಸ್ತಿಯಾಯ್ತು!
ನಿತ್ಯ ತಲೆಬಿಸಿ ಹೆಚ್ಚಾಯ್ತು.
ರಾತ್ರಿ ನಿದ್ದೆ ಕಮ್ಮಿಯಾಯ್ತು.
ನಾಳೆಯ **to-do-list** ದೊಡ್ಡದಾಯ್ತು!

**facebook**ಅಲ್ಲಿ ನೂರಾರು ಗೆಳೆಯರು,
**virtual** ಸ್ನೇಹಕ್ಕೇನೂ ಕೊರತೆಯಿಲ್ಲ.
ಯಾರೋ ಗೊತ್ತಿಲ್ಲ, ಮುಖ-ಮೂತಿ ನೋಡಿಲ್ಲ,
**chat** ಮಾಡಲು ಅಡ್ಡಿಯೇನಿಲ್ಲ.
ಆದರೆ, ನಿತ್ಯವೂ ಎದುರಾದರೂ,
ಅಕ್ಕ-ಪಕ್ಕದವರೊಡನೆ ಮಾತಾಡಲು **time** ಇಲ್ಲ!


ಸೋಮವಾರ ಬಂತು, ಶುಕ್ರವಾರ ಬಂತು.
ಇಷ್ಟರಲ್ಲಿ ಮಾಡಿದ್ದೇನೋ, ಯಾರಿಗೆ ಗೊತ್ತು?!
**weekend** ಮಜಾ ಮಾಡಿದ್ದಷ್ಟೇ ನೆನಪಿತ್ತು!!
**life**ಲ್ಲೇನೋ ಮಿಸ್ಸಾಯ್ತು, ಮಿಸ್ಸಾಯ್ತು
ಅಂತ ಮನಸ್ಸಲ್ಲಿ ಕಾಡುತಿತ್ತು.
ಮನ ಮತ್ತೆ ಶಾಂತಿಗಾಗಿ **internet**ಲ್ಲಿ ಮುಳುಗಿತು!

# Life is a Journey

- Deepa Belgod, New Jersey.



We get on somewhere,
And we get down somewhere,
But the time never waits for us.
People come,
And people go,
But some people are hard to forget.
Friends become,
And then friends depart,
But some friends leave sweet memories.
Sometimes we cry,
And sometimes we laugh,
But through difficult times just hang in there.
Through mountains and valleys,
And through changing seasons,
The journey goes on forever,
And it stops never.



ಗುರುರಾಜ್ ಕುಲಕರ್ಣಿ

# ಚಂದಿರ

ಸುಂದರ ಚಂದಿರ
ಜನಮನ ಮಂದಿರ
ನಂದನ ಗೊಳಿಸಲು ಬಾಬೇಗ
ಗಗನದಿ ಮೂಡಿ
ಮೋಡದಿ ಅಡಗಿ
ಹೊರಟಿಹುದೆಲ್ಲಿಗೆ ಹೇಳೀಗ

ನಿನ್ನನು ನೋಡಿ
ಮಕ್ಕಳು ಆಡಿ
ಬೇಡುತ ಕರೆಯಲು ಚಂದದಲಿ
ಕಂಗಳ ಚಿವುಟಿ
ಬಾಯನು ಮುರುಟಿ
ಓಡುವಿಯೇತಕೆ ಜಂಬದಲಿ ?

ನಿನ್ನಯ ನಗುಮುಖ
ಮುಗಿಯದ ಸವಿಸುಖ
ಯುವಜನ ಮರುಗಲು ಬೆರಗಾಗಿ
ಶೀತಲ ಶಾಂತಿಯ
ಕಿರಣದ ಕಾಂತಿಯ
ನೈದಿಲೆಯರಳಿದೆ ನಿನಗಾಗಿ

ಗಣಪನ ಕೋಪ
ತಂದಿಹ ಶಾಪ
ತಾಳದೆ ಮುಖದಲಿ ಕಲೆಯಾಯ್ತೆ ?
ನಿನ್ನಯ ಥಳಕಿಗೆ
ತಿಂಗಳ ಬೆಳಕಿಗೆ
ಹಿಗ್ಗುವ ಕುಗ್ಗುವ ಗತಿಯಾಯ್ತೆ

ಸಾಗರ ಮಂಥನ
ಅಮೃತ ಸಿಂಚನ
ರಾಕ್ಷಸ ವಂಚನೆ ದೂರಿದೆಯ ?
ಕೆರಳಿದ ರಾಹು
ನರಳಿದ ಕೇತು
ನುಂಗಲು ಬಂದರೆ ಬೆದರುವೆಯಾ ?

# ದೀಪಾವಳಿ

ಬಂದಿತು ದೀಪಾವಳಿಯು
ಜನರ ಮನವ  ಬೆಳಗೇ.....

ಮನೆಯೊಳಗೆ  ಹೊರಗೆ
ಬೆಳಕನ್ನು ತುಂಬಿ
ಮನದೊಳಗೆ  ಹೊರಗೆ
ಥಳಕನ್ನು ತುಂಬಿ
ಹರಿಯಿತು ಹರುಷದ  ಹೊನಲು
ಜಗದ ಕೊಳೆಯ  ತೊಳೆಯೇ.......

ದೀಪದಾ ಸಾಲು
ಮೆಟ್ಟಿಲನು ಕಟ್ಟಿ
ಆಕಾಶ ಬುಟ್ಟಿ
ಗಗನಕ್ಕೆ ಮುಟ್ಟಿ
ಸುರಿಯಿತು ಬೆಳಕಿನ ಮಳೆಯು
ಭುವಿಯ ಸ್ವರ್ಗ ಮಾಡೇ......

ತಾರೆಗಳ ಕಣ್ಣು
ಬೆರಗಾಗಿ ನಾಚಿ
ಚಂದಿರನ ಜಂಬ
ಅಡಗಿರಲು ಇಂದು
ಚಿಮ್ಮಿತು ಪ್ರೀತಿಯ ಹೊಳೆಯು
ಕೋಪತಾಪಾವಳಿಯೇ.....



ಗುರುರಾಜ್ ಕುಲಕರ್ಣಿ

## ಗೆಳೆಯರೆ

ಹಾಡನೊಂದು ಹಾಡುವೆ
ಕೇಳಿ ರಸಿಕ  ಗೆಳೆಯರೆ
ಹಿರಿಯ ಕಿರಿಯ ಯುವಕ  ಯುವತಿ
ಹೃದಯದಲ್ಲಿ ಎಳೆಯರೆ

ದೂರದೇಶದಿಂದ  ನಾವು
ಬಂದೆವಿಲ್ಲಿ ನೆಲೆಸಲು
ತೀರದಾಸೆಗಳನು ಹೊತ್ತು
ತಂದೆವಿಲ್ಲಿ ತಣಿಸಲು

ಹೊಸನಾಡನು ಹೊಸನುಡಿಯನು
ನಮ್ಮದಾಗಿ ಕಂಡೆವು
ಹೊಸರೀತಿಯ ಹೊಸನೀತಿಯ
ನಮ್ಮದೆಂದು ಮೆರೆದೆವು

ಬಾಳು ಒಂದು ಗೋಳು ಎಂಬ
ಹುಸಿಯ ನಂಬ ಬೇಡಿರಿ
ಬಾಳ ಬಾನಿನಾಳದಲ್ಲಿ
ಚಂದ್ರ ಬಿಂಬ ಕಾಣಿರಿ

## ವರಕವಿ ಬೇಂದ್ರೆ

ಮೂಡುವುದು  ನವಯುಗದಿ
ಭಾವ ಸಂಕ್ರಮಣ

ಕನ್ನಡದ ಸಿರಿನಾಡು
ಕವಿ ತಪಸಿಗಳ ಬೀಡು
ಮುನ್ನಡೆದು ಹೊಸ ದಾರಿ
ಹಿಡಿದ ಹೆಮ್ಮೆಯ ನಾಡು

ದೇಶ ಭಕ್ತಿಯ ಭಾವ
ಜೀವಿಗಳ ಗೂಡು
ದೇಶ ಭಾಷೆಗಳಾಚೆ
ಮಿಂಚಿ ಮೆರೆದಿದೆ ನೋಡು

ಒಲವು ನಲಿವಿನ ವೀಣೆ
ನಾಕು ತಂತಿಯ ಮೀಟಿ
ಸೋಲು ಗೆಲುವನು ಮಾಣೆ
ಬುದ್ಧಿ ಹೃದಯವ ನಾಟಿ

ನೋವು ಸಾವನು ಕಾಣೆ
ನಾಕಮಂದಿರ ದಾಟಿ
ಜನಮನದ ಸವಿ ಕಾಣೆ
ಕವಿಮನದ ರವಿಗ್ಯಾರುಸಾಟಿ?

# *The Path to a Healthier Life*

*–Medha Rao*



When God sent Adam and Eve to earth, why in the world did he give them an apple? He could have given them a fish or a locket, but God decided to give them an apple. He probably did this because he discreetly wanted to tell them to follow vegetarianism. Sadly, Adam and Eve never got the clue. History might not have proof about Adam and Eve's existence but it is evident that the early man resorted to eating animals in order to survive. In the era when agriculture was not prominent, non-vegetarianism was the only choice. Soon, it became an addiction and even with the onset of agriculture, man refused to relax his hold on this life-style. What occurred as an act for survival has today turned into a luxurious need. Research has proved that vegetarianism is the right way to a healthy life, displays humanity, and is beneficial to the environment.

Vegetarianism shows the route to a healthier life. History is the proof of the fact that saints of India advocated the principle of vegetarianism as a way to a disease-free life. Today, it has been scientifically proven that abstaining from animal food helps in lowered cholesterol levels and increased immunity. For ages, societies have been plagued by the myth that non-vegetarian food is rich and nutritious. However, nutritionists have broken the myth and have declared that non-vegetarian diet contains high levels of cholesterol and saturated fatty acid, which result in heart diseases, strokes, and high blood pressure. In addition, omnivores have 25 to 50% more chances of getting cancer as compared to a vegetarian. Moreover, unhygienic or incomplete processing of non-vegetarian food could lead to the outbreak of deadly viruses. The recent outbreak of mad cow disease took a severe toll on the lives of those who consumed infected meat. Moreover, deplorable hygiene standards in the processing units, make such products unfit for human consumption. On the other hand, a vegetarian diet is friendly on the heart and keeps obesity at a distance. It is easily digestible too! It is believed that meat is a great source of protein, and this is true. For example, a six ounce boiled steak has 38 grams of protein; however, with this protein comes about 44 grams of fat! On the other hand, if you take a cup of cooked lentils, it contains about 18 grams of protein, but has less than 1 gram of fat. In the end, the food with the less amount of fat is always the healthier choice. Thus, vegetarian food has all the nutritional components of non vegetarian food, without the toxins and cholesterol. Therefore, "an apple a day keeps the doctor away" but a slab of meat a day keeps a healthy life at bay!

Being a vegetarian implies that an individual is more humane, since he or she does not support the unnatural and painful conditions the animals undergo. Animals are kept under cramped confinements, and most of the time, they live in their own vomit, fecal, and urine. If people kept their pets in these conditions, then they will be convicted of animal cruelty. Therefore, these animals should not be treated any less. Millions of livestock are slaughtered all over the world, in very heartless conditions. For example, once chickens arrive at the slaughterhouse they are stunned by electrified water.

However, slaughterhouses choose to set their electricity current lower than the usual. They do this so that the meat inside the chicken is not damaged, thus retaining the monetary value of the meat. In the end, a large number of chickens are not stunned and they are conscious when they go through this terrible pain. Paul McCartney once said, “If slaughterhouses had glass walls, everyone would be a vegetarian.” The animals undergo an agonizing death at the hands of the butcher and any sensible person with the minimum humane feelings would give up non-vegetarianism. Lovers of non-vegetarian food often argue that plucking fruits and vegetables from the trees and plants is in a way “killing them.” It is true that the plants have senses, but they do not feel the pain as they lack a nervous system. Moreover, when a fruit or a vegetable is plucked from a plant, another one is formed in its place; thus, the plant lives on. However an animal feels great pain when killed, and it can never be brought to life again!

Today we live in an environment in which the atmosphere is soaked with pollution, and non-vegetarianism has its fair share of contribution to the environmental degradation. For instance, farmed animals produce a lot of manure, and this emits enormous amounts of methane into the air. Methane is scientifically proven to be 24 times more powerful than carbon dioxide. Therefore, too much methane can cause much destruction to earth. In all, 15 to 20 % of global methane emissions come from livestock. Moreover, manure from the animals can seep into our lakes and rivers, contaminating our water. This can also damage our already delicate eco-system. Many people state that not killing the animals means an increase in methane. However, this is not true because farmers forcefully make the cows and sows to produce more just so that they will have an increase in production. However, if more people follow a vegetarian diet, it prevents 1.5 tons of carbon dioxide emissions every year! Also, for meat production, more than a third of the fossil fuels are used up. As factories use fuel, they give out carbon dioxide which has an overwhelming effect on the ozone layer. A 2006 United Nations report stated, “animals for food generates more greenhouse gases than all the cars and trucks in the world combined” (www.chooseveg.com). Many argue that vegetarian foods also require fossil fuel to get processed. However, animal protein requires eight times more fossil fuel than plants. Overall, being a vegetarian will help our planet to be a better place to live in!

A new animal arrives in the world and they suddenly are at the top of the food chain, making the humans, their staple diet. This might look like a fiction in Steven Spielberg’s film, but the fear of a possibility will leave many people trembling. Mothers will be constantly looking for ways to protect their children, and all our lives will be centered on taking the precautions necessary to stay alive on earth. This thought may scare many people, and it should because we are causing immeasurable suffering to the animals that caused no grief or harm to us. But we continue to eat them to satisfy our pleasures and desires. However, vegetarianism is a healthy, humane, and environmental friendly way of life. Therefore, life gives many options, and we don’t have to kill to live!

**January:** Make your New Year resolution to be a vegetarian.

**February:** There are many vegetarian options you can check out. For instance, you can buy a veggie burger instead of a burger containing meat. Also, you can order a cheese pizza instead of pepperoni.

**March:** Start eliminating your least favorite meat dish. It is an easier and effective way to begin.

**April:** Set aside one day of the week to be a vegetarian.

**May:** Begin to replace your non-vegetarian meals with vegetarian options. Your sandwich will taste just as good with fresh vegetables, as it will with chicken. Give it a try! It will neither hurt you nor the chicken!

**June:** Show the exit door to your second favorite meat dish.

**July:** Cultivate a liking for vegetarian food by experimenting with dishes made of exotic vegetables, fruits and other vegetarian ingredients.

**August**: When you feel you are ready, you can try to abstain from non-vegetarian food thrice a week.

**September:** Reach out for those who are trying to quit non-vegetarianism. Exchanging of experiences will certainly help.

**October:** Now it's the time to eliminate your favorite meat dish.

**November:** Involve your family in this endeavor. A healthier family will lead to a happier family!

**December:** If you have successfully incorporated all the above changes, then you are ready to become a vegetarian.

**TRY THE LEAF, AND FORGET THE BEEF!**

# ಪ್ರಶ್ನೆ



ಮೀರಾ

ಆದಿ ಅಂತ್ಯವೇ ಇಲ್ಲದ
ನಿನ್ನನ್ನ,
ಹೀಗೆ ನನಗಿರುವ ಇಷ್ಟೇ
ಅವಧಿಯಲಿ
ಎಲ್ಲಿ ಅಂತ ಹುಡುಕಲಿ?

ಆಕಾರವೇ ಇಲ್ಲ ನಿನಗೆ
ಎಂದಾದರೆ,
ನಿನ್ನ ಮುಟ್ಟುವ ಬಯಕೆಯ
ಹೇಗೆ ಹತ್ತಿಕ್ಕಲಿ?

ಎಲ್ಲೆಡೆಯೂ ನೀನಿರುವುದೇ
ಆದರೆ,
ನನ್ನೊಳಗಿನ ನೋವಿಗೆ
ಕಾರಣ
ಹೇಗೆ ಹುಡುಕಲಿ?

ಎಲ್ಲವೂ ನಿನ್ನಿಚ್ಛೆಯಂತೇ
ನಡೆವುದಾದರೆ,
ಸುಮ್ಮನೆ ಹೀಗೊಂದು ಹೆಸರು
ತಗುಲಿಸಿಕೊಂಡು
ನಾನೇಕೆ ಇಲ್ಲಿರಲಿ?

ನೀನಿರುವುದೇ
ಸುಳ್ಳಾದರೆ
ಈ ಪ್ರಶ್ನೆಗಳನೆಲ್ಲ
ಯಾರಲ್ಲಿ ಕೇಳಲಿ?

# Ganesh Pooja by Children in Brindavana

*M. G. Prasad, Maplewood, New Jersey (www.taranga.us)*



Ganesha chaturthi festival is celebrated in a special way in Brindavana. The pooja is done by children which is something important as children get involved in the celebrations. When children get involved then the whole family gets involved in the celebrations. It is important that children not only carry out the rituals in a simple way but also understand the concepts behind the rituals and festivals. It is the intention of this article to provide briefly the spiritual insights and concepts behind the Ganesha Chaturthi.

## Spiritual Insights into Ganesha Chaturthi

A Hindu festival is a celebration that integrates spiritual, philosophical, religious and cultural aspects of human life. The spiritual aspect is based on the basic human instincts of joy and happiness. The philosophical aspect is based on the principle that the good always wins in the constant struggle between the good and the evil. The victory of good is to be celebrated. The religious aspect deals with the particular rituals of that festival. The spiritual insights of the stories of the specific manifestation of the God (Supreme Being) make the festival relevant to us. The cultural aspect deals with the customs, activities, food, dress, social interaction with family and friends etc. In the view of Sriranga Sadguru, a yogi-seer, “The planetary positions are favorable to spiritual development on these festivals and one should make use of these special timings”. Thus we see that festivals are not only a celebration and a means for spiritual development but also an effective means to convey the values of life to future generations.

Ganesha Chaturthi is a very important festival celebrated by Hindus around the world. It occurs during August-September of the year (fourth day of Shukla Paksha of Bhadrapada month). The form of Ganesha is not an imagination but is a yogic vision (of the Supreme Being) by the sages. Ganesha also means the ruler of the various faculties especially minds. Symbolically Ganesha’s form indicates several concepts for us to focus. He is located as energy form in the Mooladhara Chakra. The elephant face indicates the omniscient wisdom. The large ears refer to the all-pervading listening ability. The goad in right hand denotes the control of mind. The noose in left hand denotes His control over changing world. The sweet dish in His hand signifies the fruits of the sincere hard work. The other hand signifies the protection. The four-hands together denote the four-goals of human life namely dharma, artha, kama and moksha. The curved tusk when bent to right denotes the OM and when bent to left signifies the blessings of spiritual and materialistic wealth. His large belly denotes that

the faculties of the universe are embedded in Him. The snake as belt signifies the Kundalini power of yoga. The rat signifies the disturbing and leaky nature of mind. When Lord Ganesha is seated on the mind, it means that His grace firmly enables us to carry out the work successfully with the disciplined mind. Hence Lord Ganesha is worshipped before any work is begun so that no obstacles arise and deter the successful completion.

## The story commonly associated with the festival is follows:

"The Goddess Parvati created a son out of her sweat. Then she made him to guard her chamber and told him not to allow anyone to enter. The obedient boy strictly followed the rule. Lord Shiva came to enter Goddess Parvati's chamber. However the boy did not allow Lord Shiva and was very firm in stopping Lord Shiva to enter. The boy did not allow Lord Shiva to pass. In spite of Lord Shiva's intent, the boy did not yield. Lord Shiva became angry and chopped of the boy's head. As soon as Goddess Parvati came to know of this, she was very upset and asked Lord Shiva to bring back their son. Lord Shiva sent His subordinates to find a suitable head for the boy. They brought the head of a sleeping elephant facing north, and the head was put on the boy. Lord Shiva and Goddess Parvati blessed their son who is now worshipped as Lord Ganesha (Lord of all faculties) and also Lord Vighnesha (God who removes all obstacles for the mind).

## The spiritual interpretation of the story based on the vision of yoga is as follows:

Goddess Parvati represents Mother Nature. The first layer of Nature is Earth. The interpretation of Goddess Parvati creating her son using her sweat refers to her creating with the first layer of her body. The element of Earth refers to Mooladhara Chakra in which Lord Ganesha's spiritual energy form is held (Ganesha Atharva Upanishat). Thus we see correspondence between Lord Ganesha, Mooladhaara Chakra and the element Earth. After the boy was created, Mother Parvati asked him not to allow anyone into her chamber. However, this rule does not apply to her husband Lord Shiva. Lord Shiva and Goddess Parvati are not only husband and wife but also are the father and mother of the universe and they are inseparable. When the boy becomes indifferent to this fact and does not allow Lord Shiva, Lord Shiva gives him a punishment by chopping of his head. However after learning from Parvati, Lord Shiva blesses His son with an elephant's head to signify the omniscient wisdom. Then both Lord Shiva and Goddess Parvati bless Ganesha as the Lord of all faculties and mind. Thus, Lord Ganesha is to be worshipped before starting any work as His blessings will remove obstacles to our mind.

In addition, on the night of Ganesha Chaturthi, it is forbidden to see the moon. This is because as the story goes, the moon laughed at Ganesha when He fell off His rat. The interpretation of this is that Lord Ganesha is responsible for disciplining the mind. The moon signifies a wavering mind. On Ganesha Chaturthi one should meditate and focus the mind. Looking at the moon on the night of Ganesha Chaturthi, will signify wavering and a lack of focus.

Also in the celebration of Ganesha Chaturthi, the deity of Lord Ganesha is made of mud and is worshipped. Then in the evening, it is submerged in a lake or river. The spiritual insight is that the mud (earth) signifies the Mooladhara chakra and the when it is mixed with water, the energy is raised to a higher Manipoora Chakra. The physical form of the Lord is merged into the formless. Thus, we see that the physical form of the Lord Ganesha, the story and the celebration of Ganesha Chatruthi essentially deal with our mind and the ways of making our mind to take spiritual inner journey to reach the destination of God-realization. We know the utmost importance of our mind in life and living. Thus praying and worshipping Lord Ganesha with spiritual insight can only help us in reaching the goal.

*An excellent reference book in Kannada is: Festivals and Holy days of Bhaarata (in Kannada), Swami Sri Ranga Priya, Ashtanga Yoga Vijnana Mandiram (Branch), 625, 4th Cross, Hanumanth Nagar, Bangalore, India (2006) (600 pages)*








# Yugaadi



## (A Celebration of the Hindu year beginning)

*M.G. Prasad, Maplewood, New Jersey (www.taranga.us)*

Yugaadi is a very important festival as it is the beginning of the new year (samvatsara) as per the Hindu calendar. The earth's rotation around the Sun every year represents one complete cycle. The beginning of the rotation is referred from this festival. This also represents a new beginning for all efforts. It is a faith that, however one spends that day will influence the forth-coming year. Thus everyone should spend that day in peace and joy through spiritual, religious and cultural activities. In the words of Sriranga Sadguru, a yogi-seer, "The planetary positions are favorable to spiritual advancement on these special festivals and one should make use of that timing". Also, the planet of the day of Yugaadi will be the planet of that year. The major activities to be done on that day are:

Special bath: A special oil bath in the early morning has to be taken. This will not only provide health but also helps to begin the day with other religious and spiritual activities. New clothes need to be worn that day.

Home decoration: The home is to be decorated with special leaves at the door and rangoli.

Taking oath (samkalpa): One should remember God and make a willful determination to carry out spiritually elevating work.

Devata Pooja: The daily pooja has to be carried out on this day with special feelings and worshipping the God as the Lord and Controller of the time.

Homa: A homa with fire as the representative of all Gods can be carried out so that all the activities of the year will be like an offering to the God.


Listening to Panchanga: A panchanga (traditional Hindu calendar) has to be read by a learned person (purohita). The pachanga has details regarding Tithi (refers to the motion of moon), Vara (refers the seven planetary days), Nakshatra (refers to 27 stars), Yoga (refers to the union of solar and lunar time reference) and Karaana (refers to sub-division of tithi). The listening to panchanga will help in knowing upcoming picture of the year.

Charity: The act of giving by remembering God will help the person spiritually. One should give with joy whatever one can afford to the needy and the community.

Special Prasadam. The special prasadam on Yugaadi is a mixture of jaggery (refers to sweet things in life) and neem leaves (refers to bitter things in life). In addition to this, several special dishes are prepared. The meaning of the prayer to be recited is "The neem leaves with jaggery is eaten for the healthy long life, for all the prosperities and removing all bad and negative things in life"
"Shatayurvajradehaaya Sarvasampatkaraaya cha
Sarvaarishta Vinashaaya Nimbakadala Bhakshanam

Best Wishes for the new year "VIKRITI" Samvatsara" (2010-11)

# ''ಸುಮಧುರ ಸ್ನೇಹ ಸಮ್ಮಿಲನ''ದ ನಮ್ಮೀ ಬೃಂದಾವನ... ನಡೆದು ಬಂದ ದಾರಿ



ವಿ. ಪ್ರಸನ್ನ ಕುಮಾರ್

ಡಿಸೆಂಬರ್ 5, 2004 ರಂದು ಬಿಡುಗಡೆಯಾದ ''ಬೃಂದಾವನ ಉದ್ಘಾಟನ ವಿಶೇಷಾಂಕ'' ವನವಾಣಿಯಲ್ಲಿ, ಅಧ್ಯಕ್ಷರ ಸಂದೇಶವನ್ನು ತಲುಪಿಸುವ ಸುಯೋಗ ನನ್ನದಾಗಿತ್ತು. ಈ ''ಸುಮಧುರ ಸ್ನೇಹ ಸಮ್ಮಿಲನ'' ದ ಸುಂದರ ತಾಣವನ್ನು ನನ್ನ ಧರ್ಮಪತ್ನಿ ಉಷ, ಮಕ್ಕಳಾದ ಸ್ನೇಹ ಹಾಗೂ ಸುಹಾಸ್ ಮತ್ತು ನಮ್ಮ 10 ಮಂದಿ ಸ್ನೇಹಿತರು ಹಾಗೂ ಅವರ ಸಂಸಾರದ ಸಹಯೋಗದಿಂದ ಒಂದು ಉತ್ತಮವಾದ ಸಂಸ್ಥೆಯಾಗಿ ಬೆಳಸುವ ಜವಾಬ್ದಾರಿಯನ್ನು ಕೊಟ್ಟ ನ್ಯೂಜೆರ್ಸಿ ಕನ್ನಡಿಗರಿಗೆ ನನ್ನ ನಮನವನ್ನು ತಿಳಿಸುತ್ತ, ವನವಾಣಿಯ ''ಬೃಂದಾವನದ ಐದನೇ ವಾರ್ಷಿಕೋತ್ಸವ ವಿಶೇಷಾಂಕ''ದಲ್ಲಿ, ನಿಮ್ಮ ಬೃಂದಾವನ ಪುಟ್ಟ ಪುಟ್ಟ ಹೆಜ್ಜೆಗಳನ್ನು ಹಾಕುತ್ತಾ ನಡೆದು ಬಂದ ದಾರಿಯ ಬಗ್ಗೆ ನಾಲ್ಕು ಸಾಲು ಬರೆಯಲು ಅತೀವ ಆನಂದವಾಗುತ್ತಿದೆ.

ಯಾವುದೇ ಸಂಘ ಸಂಸ್ಥೆಯನ್ನು ಸ್ಥಾಪಿಸಲು ಮನದಾಳದ ಒಂದು ಬಲವಾದ ಆಸೆಯೊಡನೆ ಬೇಕಾದದ್ದು ಆಪ್ತ ಸ್ನೇಹಿತರ ಬೆಂಬಲ. ನ್ಯೂಜೆರ್ಸಿಯಲ್ಲಿ ಕನ್ನಡ ಕೂಟವನ್ನು ಸ್ಥಾಪಿಸಲು ನಮ್ಮೊಡನೆ ಹೆಗಲಿಗೆ ಹೆಗಲು ಕೊಟ್ಟವರೆಂದರೆ ಸ್ನೇಹಿತರಾದ ವಸಂತ ಹಾಗೂ ರಾಜ್ ಶಶಿ, ಸೀಮಾ ಹಾಗೂ ವಿಜಯ್ ಮೂರ್ತಿ,  ಸಾಧನ ಹಾಗೂ ಶಂಕರ್ ಶೆಟ್ಟಿ, ಡಾ. ಲಕ್ಷ್ಮಿ ಹಾಗೂ ಗುರು ಪ್ರಸಾದ್, ಗಾಯತ್ರಿ ಹಾಗೂ ರವಿ ರಾಜಗೋಪಾಲ್, ಅನೂಪ್ ಹಾಗೂ ಸಿಂಹಾದ್ರಿ ಸಂತೆಬೆನ್ನೂರ್, ವೀಣ ಹಾಗೂ ಮುರಳಿ ಮರಿಯಪ್ಪ, ಡಾ. ಶಕುಂತಲ ಹಾಗೂ ರಾಮು ನಾಗರಾಜ, ಅರುಣ ಹಾಗೂ ಶ್ರೀಧರ್ ಸುಬ್ಬರಾವ್ ಮತ್ತು ಶೀಲ ಹಾಗೂ ಅಶೋಕ್ ತಿಮ್ಮಪ್ಪ. ಈ ಹನ್ನೊಂದು ಸಂಸಾರಗಳ ಅವಿರತ ಶ್ರಮದಿಂದ ಹಾಕಿದ ಬಲವಾದ ಬುನಾದಿ ಹಾಗೂ ಈ ಕಳೆದ ಐದು ವರ್ಷಗಳಲ್ಲಿ ಇವರೊಡನೆ ಸೇರಿರುವ ಸುಧಾ ಹಾಗೂ ಡಾ. ರಾಮ್ ಬೆಂಗಳೂರ್, ಸುಜಾತ ಹಾಗೂ ನಿರಂಜನ್ ಬಾನವ್, ಹೇಮ ಹಾಗೂ ಬೆನ್ ಕಾಂತರಾಜು, ಸುಭಾಷಿಣಿ ಹಾಗೂ ಮಧು ರಂಗಯ್ಯ, ಮಾಲಿನಿ ಹಾಗೂ ರಾಘವೇಂದ್ರ ಮೂರ್ತಿ, ಸ್ಮಿತ ಹಾಗೂ ಸಂತೋಷ್ ಕುಮಾರ್ ಕಡ್ಲೆಬೇಳೆ ಮತ್ತು ಮರ್ಲಿನ್ ಹಾಗೂ ಮಾರ್ಕ್ ಮೆಂಡೋಂಕ ರಂತಹ ಹತ್ತು ಹಲವಾರು ಉತ್ಸಾಹಿತ ಸದಸ್ಯರ ಕಠಿಣ ಪರಿಶ್ರಮದ ಫಲವಾಗಿ ''ಐದರ ಹಸುಳೆ ಇಂದು ಇಪ್ಪತ್ತೈದರ ಯುವಕನಂತೆ'' 6ನೇ ಅಕ್ಕ ವಿಶ್ವ ಸಮ್ಮೇಳನವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಬೃಂದಾವನದ ಎಲ್ಲಾ ಉತ್ಸಾಹಿ ಸದಸ್ಯರು ಹಾಗೂ ನ್ಯೂಜೆರ್ಸಿ, ನ್ಯೂಯಾರ್ಕ್, ಪೆನ್ಸಿಲ್ವೇನಿಯ, ಕನೆಕ್ಟಿಕಟ್ ಹಾಗೂ ಡೆಲವೇರ್ ರಾಜ್ಯದಲ್ಲಿ ನೆಲಸಿರುವ ಸಹಸ್ರಾರು ಉತ್ಸಾಹಿ ಕನ್ನಡಿಗರ ಸಹಯೋಗದಿಂದ ಇದೊಂದು ಅತ್ಯಂತ ಯಶಸ್ವಿ ಸಮ್ಮೇಳನವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

2004–06 ರಲ್ಲಿ ನನ್ನ ಅಧ್ಯಕ್ಷತೆಯಲ್ಲಿ, 2006–08 ರಲ್ಲಿ ಶ್ರೀಮತಿ ವಸಂತ ಶಶಿ ಯವರ ನಾಯಕತ್ವದಲ್ಲಿ ಹಾಗೂ ಸಧ್ಯದ 2008–10 ರಲ್ಲಿ ಶ್ರೀಮತಿ ಉಷ ಪ್ರಸನ್ನ ಹಾಗೂ ಅವರ 10 ಮಂದಿಯ ''ಸ್ಫೂರ್ತಿ'' ತಂಡದ ಮಾರ್ಗದರ್ಶನದಲ್ಲಿ ನಿಮ್ಮ ''ಬೃಂದಾವನ'' ಹಲವಾರು ಉತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ದಾನಶೀಲ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ.ಈ ಐದು ವರ್ಷಗಳಲ್ಲಿ ಕರ್ನಾಟಕದಿಂದ ಆಗಮಿಸಿದ್ದ ಅತಿಥಿಗಳಾದ ಶ್ರೀಯುತರಾದ ರಾಜೇಶ್ ಕೃಷ್ಣನ್, ಭಾರ್ಗವ, ರತ್ನಮಾಲ ಪ್ರಕಾಶ್, ಮಾಲತಿ ಶರ್ಮ, ಅಪೂರ್ವ ಶ್ರೀಧರ್, ಪ್ರವೀಣ್ ಗೋಖ್ರ್ಖಂಡಿ, ಅನೂರ್ ಅನಂತಕೃಷ್ಣ ಶರ್ಮ (ಶಿವು), ಅ. ರಾ. ಮಿತ್ರ, ಪಿ. ಬಿ. ಶ್ರೀನಿವಾಸ್, ಪುತ್ತೂರ್ ನರಸಿಂಹ ನಾಯಕ್, ಶಮಾ ಹಾಗೂ ಸಂಜಯ್, ಸಂಗೀತ ಕುಲಕರ್ಣಿ, ನಾಗಾಭರಣ, ಶ್ರೀನಿವಾಸ್ ಕಪ್ಪಣ್ಣ, ಜಯಂತ್ ಕಾಯ್ಕಿಣಿ, ಗುರುಕಿರಣ್, ಅರುಣ್ ಕುಮಾರ್ ರವರ ''ಲಯತರಂಗ'' ತಂಡದವರು, ಗಂಗಾವತಿ ಪ್ರಾಣೇಶ್, ಮಿಮಿಕ್ರಿ ದಯಾನಂದ್, ರಿಚರ್ಡ್ ಲೂಯಿಸ್, ಈ ಟಿವಿ ಸೂರಿ, ಸಿಹಿಕಹಿ ಚಂದ್ರು, ಶ್ರೀನಾಥ್ ವಸಿಷ್ಠ, ಕಲ್ಪನ ನಾಗನಾಥ್, ಸಾರಿಕ ಪ್ರವೀಣ್, ಜಹಾಂಗೀರ್, ಗಣೇಶ್ ದೇಸಾಯಿ, ನಮಿತ ದೇಸಾಯಿ ಹಾಗೂ ಅಮೆರಿಕದ ಹಲವಾರು ಕನ್ನಡ ಕೂಟಗಳ ಸದಸ್ಯರಿಂದ ಸಂಗೀತ, ನೃತ್ಯ, ನಾಟಕ, ಸಿನಿಮ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಶಂಕರ ಐ ಫೌಂಡೇಶನ್, ಅಕ್ಷಯಪಾತ್ರೆ ಹಾಗೂ ಸಮರ್ಥನಮ್ ಸಂಸ್ಥೆಗಳಿಗೆ ದಾನ ಧರ್ಮ ಕಾರ್ಯಗಳು, ಫ್ರಾಂಕ್ಲಿನ್ ಟೌನ್ ಶಿಪ್ ಸೂಪ್ ಕಿಚನ್, ಫುಡ್ ಬ್ಯಾಂಕ್, ಕೆ ಎಸ್ ಅಶ್ವಥ್ ರವರಿಗೆ ಸಹಾಯ, ಸುನಾಮಿ ಸಂತ್ರಸ್ತರಿಗೆ ನೆರವು ಹಾಗೂ ಉತ್ತರ ಕರ್ನಾಟಕದ ನೆರೆಯ ಸಂತ್ರಸ್ತರಿಗೆ ಮನೆಯೊಂದನ್ನು ಕಟ್ಟಲು ಧನ ಸಂಗ್ರಹಣೆ ನೆಡೆಸಿ, ''ಬೃಂದಾವನ'' ಎಲ್ಲ ರೀತಿಯಲ್ಲೂ ಒಂದು ಉತ್ತಮ ಸಂಸ್ಥೆಯಾಗುವ ಕಡೆ ದಾಪುಗಾಲು ಹಾಕುತ್ತಿದೆ.

''ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು'' ಎಂದು ತಿಳಿದು ಎಲ್ಲ ಮಕ್ಕಳಿಗೆ ಬೃಂದಾವನದ ಸಮಾರಂಭಗಳಲ್ಲಿ ಪ್ರಾಶಸ್ತ್ಯ ಕೊಟ್ಟು, ''ಕೂಡಿ ಬಾಳಿದರೆ ಸ್ವರ್ಗ ಸುಖ....ಜೇನಿನ ಗೂಡು ನಾವೆಲ್ಲ, ಬೇರೆಯಾದರೆ ಜೇನಿಲ್ಲ'' ಎಂಬ ಮಂತ್ರವನ್ನು ಸಾರುತ್ತ ನೆರೆಯ ಸಂಘ ಸಂಸ್ಥೆಗಳೊಂದಿಗೆ ಹಲವು ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ ನಮ್ಮ ಬೃಂದಾವನ. ಇದಕ್ಕೆ ಪೂರಕವೆಂಬಂತೆ ಇತ್ತಿಚಿಗೆ ನಡೆದ ಬೃಂದಾವನದ ಐದನೇ ವಾರ್ಷಿಕೋತ್ಸವದ ಕಾರ್ಯಕ್ರಮಗ ಳೇ ಸಾಕ್ಷಿ. ಅಮೇರಿಕದ ಈಶಾನ್ಯ ಪ್ರದೇಶದ ಐದು ಕನ್ನಡ ಕೂಟಗಳಾದ ಮೇರಿಲ್ಯಾಂಡಿನ ಕಾವೇರಿ ಕನ್ನಡ ಕೂಟ, ಡೆಲವೇರಿನ ತ್ರಿವೇಣಿ ಕನ್ನಡ ಕೂಟ, ಪೆನ್ಸಿಲ್ವೇನಿಯದ ಹ್ಯಾರಿಸ್ ಬರ್ಗ್ ಕನ್ನಡ ಕೂಟ, ಕನೆಕ್ಟಿಕಟ್ಟಿನ ಹೊಯ್ಸಳ ಕನ್ನಡ ಕೂಟ ಹಾಗೂ ಅತಿಥೇಯ ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟದಿಂದ 18 ಮಕ್ಕಳ ಕಾರ್ಯಕ್ರಮ ಹಾಗೂ 10 ದೊಡ್ಡವರ ಕಾರ್ಯಕ್ರಮಗಳನ್ನು ಸುಮಾರು 100 ಮಕ್ಕಳು ಹಾಗೂ 50 ಜನ ದೊಡ್ಡವರು ವೇದಿಕೆ ಮೇಲೆ ಬಂದು ರಂಜಿಸಿದ್ದು ಬೃಂದಾವನದ ಐದನೇ ವಾರ್ಷಿಕೋತ್ಸವ ಹಾಗೂ ಮಕ್ಕಳ ದಿನಾಚರಣೆಗೆ ವಿಶೇಶವಾದ ಮೆರಗನ್ನು ನೀಡಿತ್ತು. ಮಕ್ಕಳಿಗೆ ''ಬೃಂದಾವನ ಐಡಲ್'' ಹಾಗೂ ''ಚಿತ್ರಕಲಾ'' ಸ್ಪರ್ಧೆಗಳನ್ನೂ, ದೊಡ್ಡವರಿಗೆ ರಂಗೋಲಿ, ಆರತಿ ತಟ್ಟೆ ಹಾಗೂ ತರಕಾರಿ ಕೆತ್ತನೆ ಸ್ಪರ್ಧೆಗಳನ್ನೂ ನಡೆಸಲಾಯ್ತು. ಸದಸ್ಯರ ವಿಶಿಷ್ಟವಾದ ಕಲೆಗಳನ್ನು ಹೊರತೆಗೆಯಲು ಹಾಗೂ ಮಕ್ಕಳ ಪ್ರತಿಭೆಗೆ ಪುರಸ್ಕಾರ ಸಿಗಲು ಸ್ಫೂರ್ತಿ ತಂಡದವರು ನಡೆಸುತ್ತಿರುವ ಕಾರ್ಯಕ್ರಮಗಳು ಶ್ಲಾಘನೀಯ.

2004ರಲ್ಲಿಸ್ಥಾಪಕಸಮಿತಿಯಿಂದಬೃಂದಾವನದಸಂವಿಧಾನವನ್ನುರಚಿಸಿದನಂತರ2007ರಲ್ಲಿ2 ತಿದ್ದುಪಡಿಗಳನ್ನುಮಾಡಿಸಿಕೊಂಡುಈಗ 2010ರಲ್ಲಿ 3 ತಿದ್ದುಪಡಿಗಳೊಂದಿಗೆ ಬೃಂದಾವನದ ಸಂವಿಧಾನ ಈಗ ಪಕ್ವತೆಯನ್ನು ಹೊಂದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಕಳೆದ 2 ವರ್ಷಗಳಿಂದ ಈಸ್ಟ್ ವಿಂಡ್ಸರ್ ಶಾಲೆಗಳ ಸುಸಜ್ಜಿತವಾದ ರಂಗಮಂದಿರದಲ್ಲಿ ಕಾರ್ಯಕ್ರಮಗಳು ಅದ್ಭುತವಾಗಿರುವುದಲ್ಲದೆ, ಅನುಕೂಲಕರವಾದ ಹಾಗೂ ಶುಚಿಯಾದ ಕೆಫೆಟೀರಿಯದಲ್ಲಿ ಕೊಡಲಾಗುತ್ತಿರುವ ಊಟ ತಿಂಡಿಗಳು ತುಂಬಾ ರುಚಿಯಾಗಿರುತ್ತದೆ.

ಸ್ನೇಹಪರತೆ, ಸಂಯಮ, ಸಜ್ಜನಿಕೆ ಹಾಗೂ ಸಹಕಾರ್ಯ ಈ ಸಂಸ್ಥೆಯ ನಾಲ್ಕು ಆಧಾರ ಸ್ಥಂಭಗಳು. ಸವಿಯಾದ ಮಾತು, ಸಿಹಿಯಾದ ಊಟ, ಸೊಗಸಾದ ನೋಟ ಹಾಗೂ ಸಕಲರಿಗೂ ಶುಭವಾಗಲಿ ಎಂಬುದು ಈ ಕೂಟದ ನಾಲ್ಕು ಧ್ಯೇಯಗಳು. ಈ ನಾಲ್ಕು ಸ್ಥಂಭಗಳ ಬಲವಾದ ಬುನಾದಿಯ ಮೇಲೆ ಈ ನಾಲ್ಕು ಧ್ಯೇಯಗಳನ್ನ ಪರಿಪಾಲಿಸುತ್ತ, ಜನವರಿ 2011 ರಿಂದ ನಿಮ್ಮ ನಮ್ಮೆಲ್ಲರ ಈ ಬೃಂದಾವನದ ಬೆಳವಣಿಗೆಯ ಜವಾಬ್ದಾರಿಯನ್ನು ಹೊರಲಿರುವ ನಾಲ್ಕನೇ ಕಾರ್ಯಕಾರಿ ಸಮಿತಿಯವರಿಗೆ ಇನ್ನೂ ಹೆಚ್ಚಿನ ಯಶಸ್ಸನ್ನು ಕೋರುತ್ತಾ ನಮ್ಮ ''ಸುಮಧುರ ಸ್ನೇಹ ಸಮ್ಮಿಲನ'' ದ ಬೃಂದಾವನಕ್ಕೆ ಸಂತೃಪ್ತಿಯಿಂದ ನಮ್ಮ ಅಳಿಲು ಸೇವೆಯನ್ನು ಸಲ್ಲಿಸಲು ಸದಾ ಕಾಲ ಸಿದ್ಧವಾಗಿರುವ

-''ಸಂತೃಪ್ತಿ'' ನಿವಾಸಿಗಳಾದ ಸುಹಾಸ್, ಸ್ನೇಹ, ಉಷ ಹಾಗೂ ವಿ. ಪ್ರಸನ್ನ ಕುಮಾರ್

# ಕನ್ನಡ ಕಸ್ತೂರಿ

## ಪ್ರಶಾಂತ್, ಕಿಶೋರ್

ಅಮೇರಿಕಾದಲ್ಲಿ ರಾರಾಜಿಸುತ್ತಿರುವ ಕನ್ನಡ ಕಸ್ತೂರಿ ಬಾನುಲಿ ಕಾರ್ಯಕ್ರಮ

ಕನ್ನಡ ಕಸ್ತೂರಿ ಕಾರ್ಯಕ್ರಮವನ್ನು ತಪ್ಪದೇ ಕೇಳುವ ಕನ್ನಡಿಗ ,

ಸಪ್ತ ಸಾಗರದಾಚೆಯ ನಾಡಿನಲ್ಲಿ ರೇಡಿಯೋ ಹಾಕಿದಾಗ, ನಮ್ಮ ಕಸ್ತೂರಿ ಕನ್ನಡದ ಮಾತು ಹಾಗು ಕನ್ನಡ ಹಾಡು ಕೇಳಿದರೆ, ಕನ್ನಡಿಗರಿಗೆ ಆಗುವ ಅನುಭವ ಹಾಗು ಆನಂದ ಅವರ್ಣನೀಯ. ಇದೇ ಆನಂದ ಹಾಗು ಸಂತೋಷಗಳಿಂದ, ನಿಸ್ವಾರ್ಥವಾಗಿ ಕಳೆದ ಸುಮಾರು ಐದು ವರ್ಷಗಳಿಂದ ಸತತವಾಗಿ ಪ್ರತಿ ಶುಕ್ರವಾರ ಅಥವಾ ಭಾನುವಾರ, ನ್ಯೂಜೆರ್ಸಿಯ ಆಕಾಶವಾಣಿಯೊಂದರಲ್ಲಿ ಕಸ್ತೂರಿ ಕನ್ನಡದ ಕಂಪನ್ನು ಹರಡುತ್ತಾ ಬಂದಿದ್ದಾರೆ – ಪ್ರಶಾಂತ್ ಮತ್ತು ಕಿಶೋರ್

ಉತ್ತರ ಅಮೇರಿಕಾ ಖಂಡದ ನ್ಯೂ ಜೆರ್ಸಿ ರಾಜ್ಯದಲ್ಲಿ ''ಧೂಮ್ ಎಫ಼್. ಎಮ್.'' ಎಂಬುದು ಭಾರತೀಯರಿಗಾಗಿ ಮೀಸಲಾಗಿಟ್ಟಿರುವ ಒಂದು ಜನಪ್ರಿಯ ಬಾನುಲಿ ಕೇಂದ್ರ. ಇದೇ ಕೇಂದ್ರದಿಂದ ಶ್ರೀಮತಿ ನಂದಿತ ಹಾಗು ಶ್ರೀ ಶ್ರೀನಿವಾಸ್ ದಂಪತಿಗಳು ಒಂದು ವರ್ಷಗಳ ಕಾಲ ಕನ್ನಡ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿದ್ದರು. ಕಾರಣಾಂತರದಿಂದಾಗಿ ಈ ದಂಪತಿಗಳು ಸ್ವದೇಶಕ್ಕೆ ಹಿಂದಿರುಗಲು ನಿರ್ಧರಿಸಿದರು. ತತ್ಸಮಯದಲ್ಲಿ ಪ್ರಶಾಂತ್ ಹಾಗು ಕಿಶೋರ್ ಒಂದುಗೂಡಿ, ''ಧೂಮ್ ಎಫ಼್. ಎಮ್'' ನ ಅಂದಿನ ನಿರ್ದೇಶಕರಾಗಿದ್ದ ಶ್ರೀ ಪಾಲ್ ಸೂರಿಯವರೊಡನೆ ಮಾತನಾಡಿ, ಈ ಕನ್ನಡ ಕಾರ್ಯಕ್ರಮವನ್ನು ನಿರ್ವಹಿಸುವ ಅವಕಾಶವನ್ನು ತಮಗೆ ಕೊಡಬೇಕೆಂದು ವಿನಂತಿಸಿಕೊಂಡರು.

ಪ್ರಶಾಂತ್ ರವರ ಕನ್ನಡ ಸಿನಿಮಾ ರಂಗದ ಪರಿಚಯ ಹಾಗು ಕಿಶೋರ್ ರವರ ವೃತ್ತಿರಂಗದ ಅನುಭವ ಮತ್ತು ಇವರೀರ್ವರ ಅಪಾರವಾದ ಕನ್ನಡ ಪ್ರೇಮ, ಕರ್ನಾಟಕ ಮಾತೆಗೆ / ಕನ್ನಡ ಭಾಷೆಗೆ ಹೇಗಾದರೂ ಸೇವೆ ಸಲ್ಲಿಸಬೇಕೆಂಬ ಛಲ ಹಾಗು ಹುಮ್ಮಸ್ಸಿನಿಂದ ಕೂಡಿದ್ದ ನಿಸ್ವಾರ್ಥ ಮನೋಭಾವಕ್ಕೆ ಮಣಿದು, ನಿರ್ದೇಶಕರು ''ಕನ್ನಡ ಕಸ್ತೂರಿ'' ಕಾರ್ಯಕ್ರಮದ ನಿರ್ವಹಣೆಯನ್ನು ಈ ಜೋಡಿಗೆ ಕೊಡಲು ನಿರ್ಧರಿಸಿದರು. ಅಂದಿನಿಂದ ಪ್ರಾರಂಭವಾದ ಈ ಕಿಲಾಡಿ ಜೋಡಿಗಳ ಕಾರ್ಯಕ್ರಮ, ಸುಮಾರು 200ಕ್ಕೂ ಹೆಚ್ಚು ಕಂತಿನ ರೂಪದಲ್ಲಿ ಇಂದಿನವರೆಗೂ ಪ್ರಸಾರವಾಗುತ್ತಿದೆ. ಮೊದಲಿಗೆ ಪ್ರತಿ ಶುಕ್ರವಾರ ರಾತ್ರಿ 8 ರಿಂದ 10 ರವರೆಗೆ ಪ್ರಸಾರವಾಗುತ್ತಿದ್ದ ''ಕನ್ನಡ ಕಸ್ತೂರಿ'' ಕಾರ್ಯಕ್ರಮ ಕಳೆದು ಒಂದು ವರ್ಷದಿಂದ ಭಾನುವಾರ ಬೆಳಗ್ಗೆ 9 ರಿಂದ 11 ರ ವರೆಗೆ ಪ್ರಸಾರವಾಗುತ್ತಿದೆ.

ಕಾರ್ಯಕ್ರಮದ ವೈಶಿಷ್ಟ್ಯಗಳು

ಪ್ರತೀವಾರ ಹೊಸ ವಿಷಯವೊಂದನ್ನು ಆರಿಸಿಕೊಂಡು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಶಿವರಾತ್ರಿ, ನಾಗರಪಂಚಮಿಯಿಂದ ಹಿಡಿದು ದೀಪಾವಳಿವರೆಗೂ ಪ್ರತಿಯೊಂದು ಹಬ್ಬದ ಆಚರಣೆ ಈ ಕಾರ್ಯಕ್ರಮಗಳಲ್ಲಿ ವಿಜೃಂಭಿಸುತ್ತದೆ. ಹಿಂದೂ ಧರ್ಮದ ಪ್ರಕಾರ ಆಚರಿಸಲಾಗುವ ಹಬ್ಬದ ಹಿಂದೆ ಇರುವ ಕಥೆ ಹಾಗು ಆಧ್ಯಾತ್ಮಿಕ ವಿವರಣೆಯನ್ನು ಕೂಲಂಕಶವಾಗಿ ಕೊಡಲಾಗುತ್ತದೆಯಲ್ಲದೆ ಕೇಳುತ್ತಿರುವ ಶ್ರೋತೃಗಳ ಅನಿಸಿಕೆಗಳು ಹಾಗು ವಿಚಾರಗಳನ್ನು ''ಆನ್ ಏರ್'' ಮೂಲಕ ಮಾತನಾಡಿಸಿ ವಿಚಾರಗಳನ್ನು ಎಲ್ಲರೊಡನೆ ಹಂಚಿಕೊಳ್ಳಲಾಗುತ್ತದೆ. ಇದಲ್ಲದೆ ತಿಂಗಳಿಗೆ ಎರಡು ಬಾರಿ ''ನಿಮ್ಮ ಮೆಚ್ಚಿನ ಚಿತ್ರಗೀತೆಗಳು'' ಹಾಗು ವರ್ಷಕೊಮ್ಮೆ ''ಕನ್ನಡ ರಾಜ್ಯೋತ್ಸವ'' ಆಚರಣೆ ''ಕನ್ನಡ ಕಸ್ತೂರಿ''ಯ ಪ್ರಮುಖ ಆಕರ್ಷಣೆಗಳು. ರಾಜ್ಯೋತ್ಸವ ದಿನಾಚರಣೆಯ ದಿನದಂದು ಕನ್ನಡ ಸಿನಿಮಾ ರಂಗದ ಜನಪ್ರಿಯ ಕಣ್ಮಣಿಗಳೊಡನೆ ದೂರವಾಣಿಯ ಮೂಲಕ ''ನೇರ'' ಸಂಭಾಷಣೆ ನಡೆಸಲಾಗುವುದು.

ಆಗೊಮ್ಮೆ ಈಗೊಮ್ಮೆ ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳ, ಪುಣ್ಯಕ್ಷೇತ್ರ ಅಥವಾ ಪ್ರವಾಸೋದ್ಯಮ ತಾಣದ ಬಗ್ಗೆ ಸವಿಸ್ತಾರವಾದ ವಿವರಣೆಯನ್ನು ನೀಡುವುದರ ಮೂಲಕ ಈ ಸ್ಥಳಗಳ ಪ್ರತಿಷ್ಠೆಗೆ ಇನ್ನಷ್ಟು ಹೆಚ್ಚಿನ ಮೆರುಗನ್ನು ನೀಡಲಾಗುವುದು. ತಿಂಗಳಿಗೊಮ್ಮೆ ಕನ್ನಡ ಚಲನ ಚಿತ್ರರಂಗದ ಒಬ್ಬ ಗಣ್ಯವ್ಯಕ್ತಿಯ ಪೂರ್ಣ ಹಿನ್ನಲೆ ಹಾಗು ಅವರ ಕನ್ನಡ ಚಿತ್ರಗಳಿಂದ ಆಯ್ದ ಗೀತೆಗಳನ್ನು ಪ್ರಸಾರ

ಮಾಡಲಾಗುವುದು. ಈ ರೀತಿಯಾಗಿ ನಮ್ಮ ಕನ್ನಡ ಜೋಡಿಗಳು ಈವರೆಗೆ ನಡೆಸಿಕೊಟ್ಟಿರುವ ಪುಟ್ಟಣ್ಣ ಕಣಗಾಲ್, ಡಾ. ರಾಜ್ ಕುಮಾರ್, ಡಾ. ವಿಷ್ಣುವರ್ಧನ್, ಹಂಸಲೇಖ, ದ್ವಾರಕೀಶ್ ಮುಂತಾದವರ ಬಗೆಗಿನ ಕಾರ್ಯಕ್ರಮಗಳು ಅಮೇರಿಕದ, ಅದರಲ್ಲೂ ನ್ಯೂಜೆರ್ಸಿ ಕನ್ನಡಿಗರ ಮನಸನ್ನು ಸೂರೆಗೊಂಡಿವೆ.

ಇದಲ್ಲದೆ ಬಾನುಲಿ ಕೇಂದ್ರದಲ್ಲಿ ಕರ್ನಾಟಕದ ವಿವಿಧ ಕ್ಷೇತ್ರಗಳ ಪ್ರಮುಖ ವ್ಯಕ್ತಿಗಳೊಡನೆ ನಡೆಯುವ ''ಸಂದರ್ಶನ'' ಹಾಗು ದೂರವಾಣಿ ಮೂಲಕ ನಡೆಯುವ ''ಮಾತುಕತೆ'' ಕಾರ್ಯಕ್ರಮಗಳು, ''ಕನ್ನಡ ಕಸ್ತೂರಿ'' ಯ ವೈವಿಧ್ಯತೆಯನ್ನು ಎತ್ತಿ ತೋರಿಸುತ್ತದೆ. ರಿಚರ್ಡ್ ಲೂಯಿಸ್, ನಾಗಾಭರಣ, ರೂಪ ಐಯ್ಯರ್, ಮೈಸೂರ್ ಆನಂದ್, ಸ್ವಾಮಿ ನಿರ್ಭಯಾನಂದ, ಬದರಿ ಪ್ರಸಾದ್, ಶಂಕರ್ ಶಾನಭೋಗ್, ರಂಗಸ್ವಾಮಿ (ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರು) ಹಾಗು ಜಿ. ಎಂ. ಹೆಗಡೆ (ಕೃಷಿ ಸಲಹೆಗಾರರು) ಇವರೊಡನೆ ನಡೆದ ಸಂದರ್ಶನಗಳು ಶ್ರೋತೃಗಳಿಗೆ ಅಪಾರ ಸಂತಸ ತಂದುಕೊಟ್ಟಿತು.

ಪ್ರತಿ ಭಾನುವಾರ ಬಿತ್ತರಿಸುವ ಹಾಡುಗಳ ಮಧ್ಯೆ ಕನ್ನಡ ಚಿತ್ರ ತಾರೆಗಳಿಂದ ಶುಭ ಸಂದೇಶಗಳು ಇರುತ್ತವೆ. ಕಾರ್ಯಕ್ರಮಗಳನ್ನು ಆಲಿಸುವ ಕನ್ನಡಿಗರ ಮನಸ್ಸನ್ನು ಚುರುಕು ಗೊಳಿಸಲು ಪ್ರಶ್ನೆಗಳನ್ನು ಕೇಳಿ, ಸರಿಯಾದ ಉತ್ತರ ಹೇಳಿದವರಿಗೆ ಕನ್ನಡ ಸಿನಿಮಗೆ ಉಚಿತ ಟಿಕೆಟ್ ಅಥವಾ ಮೇರು ನಟ ನಟಿಯರು, ನಿರ್ಮಾಪಕ / ನಿರ್ದೇಶಕರು ಸಹಿ ಹಾಕಿರುವ ಆಡಿಯೊ ಸಿ. ಡಿ. ಗಳನ್ನು ಬಹುಮಾನವಾಗಿ ಕಳಿಸಿಕೊಡಲಾಗುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಭಾನುವಾರ ಬೆಳಗ್ಗೆ ಆರಾಮಾಗಿ ಮಲಗಿರುತ್ತಿದ್ದ ಹಲವಾರು ಕನ್ನಡಿಗರಿಗೆ ನಮ್ಮ ''ಕನ್ನಡ ಕಸ್ತೂರಿ'' ಕಾರ್ಯಕ್ರಮ ಬೇಗ ಏಳುವಂತೆ ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು...ಭಲೆ ಪ್ರಶಾಂತ್ ಹಾಗು ಕಿಶೋರ್!

ಕಾರ್ಯಕ್ರಮದ ನಿರ್ವಾಹಕರ ಬಗ್ಗೆ ಎರಡು ಮಾತು:

ಪ್ರಶಾಂತ್ ಮೈಸೂರ್ : ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜನಿಯರ್ ಆಗಿರುವ ಇವರಿಗೆ ಕನ್ನಡವೆಂದರೆ ಪಂಚ ಪ್ರಾಣ. ಕೆಲಸ ಮಾಡುವುದು ಹೊರ ರಾಜ್ಯದಲ್ಲಾದ ಕಾರಣ ಪ್ರತಿ ಭಾನುವಾರ ಸಂಜೆ ಕೆಲಸಕ್ಕೆ ವಿಮಾನ ಹತ್ತಿದರೆ ಮತ್ತೆ ಮನೆ ಸೇರುವುದು ಗುರುವಾರ ಮಧ್ಯ ರಾತ್ರಿಯ ಹೊತ್ತಿಗೆ. ಬಿಸಿಲು ಮಳೆಗೆ ಬಿರುಗಾಳಿ ಚಳಿಗೆ...ಮಂಜಿಗೆ ಹೆದರದೆ ಎಂತಹ ಪ್ರತಿಕೂಲ ವಾತಾವರಣವಿದ್ದರೂ ಭಾನುವಾರ ಬೆಳಗ್ಗೆ ಕನ್ನಡ ಕಸ್ತೂರಿ ಕಾರ್ಯಕ್ರಮಕ್ಕೆ ಹಾಜರ್. ಕಾರ್ಯಕ್ರಮ ಚೆನ್ನಾಗಿ ಮೂಡಿಬರಲು ಸಾಕಷ್ಟು ''ಹೋಮ್ ವರ್ಕ್'' ಮಾಡಿ ತಯಾರಾಗುವ ಧೀರ. ಕನ್ನಡ ಸಿನಿಮ ದಿಗ್ಗಜರೊಂದಿಗೆ ಒಡನಾಟ ಹಾಗು ಭಾಷೆ ಒಲುಮೆಯಿಂದಾಗಿ ಚಿತ್ರಲೋಕದ ಬಗ್ಗೆ ಅಪಾರವಾದ ಮಾಹಿತಿ ಹಾಗು ಅನುಭವ ಹೊಂದಿದ್ದಾರೆ. ಹಬ್ಬಗಳ ಆಚರಣೆ, ಸ್ಥಳ ಪುರಾಣಗಳ ಮಹಿಮೆ, ಕನ್ನಡ ಚಿತ್ರಗಳ ಅವಲೋಕನದ ಶೈಲಿ ವಾಸ್ತವ್ಯಗಳ ವಿವರಣೆ ಪ್ರಶಾಂತ್ ಅವರನ್ನು ಕನ್ನಡ ಕಸ್ತೂರಿಯ ಅವಿಭಾಜ್ಯ ಅಂಗವನ್ನಾಗಿ ಮಾಡಿದೆ. 2000ನೇ ಇಸವಿಯಲ್ಲಿ ಡಾ. ವಿಷ್ಣುವರ್ಧನ್ ರವರ ಬಗ್ಗೆ **www.vishnuvardhan.com** ವೆಬ್ ಸೈಟ್ ನಿರ್ಮಾಣ ಮಾಡಿ ಇಂದಿಗೂ ನಿರ್ವಹಿಸುತ್ತಾ ಬಂದಿದ್ದಾರೆ. ಕನ್ನಡ ಚಿತ್ರರಂಗದ ಮತ್ತೊಂದು ತಾರೆ ರಮೇಶ್ ಅರವಿಂದ್ ರವರ ಬಗ್ಗೆ **www.ramesharvind.com** ವೆಬ್ ಸೈಟ್ ಇವರ ಮತ್ತೊಂದು ಕೊಡುಗೆ.

ಕಿಶೋರ್ : ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರಾದ ಇವರು ಕನ್ನಡ ಕಸ್ತೂರಿ ಕಾರ್ಯಕ್ರಮಗಳಲ್ಲಿ ಶ್ರೀ ಪ್ರಶಾಂತ್ ಅವರಿಗೆ ನೆಚ್ಚಿನ ಸಹಪಾಠಿ. ಇವರದು ಮೃದು ಸ್ವಭಾವದ ವ್ಯಕ್ತಿತ್ವ. ಕನ್ನಡಾಭಿಮಾನಿಯಾದ ಇವರು ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸಲು ಯಾವುದೇ ತ್ಯಾಗ ಮಾಡಲು ಸಿದ್ಧ. ಇದಲ್ಲದೆ ಇವರು ಕ್ರಿಕೆಟ್ ಪ್ರೇಮಿ ಕೂಡ. ಭಾರತದಲ್ಲಿ ಆಡಿಯೋ ಅಂಗಡಿ ನಡೆಸುತ್ತಿದ್ದ ಇವರು ಕಳೆದ ಮೂರು ವರ್ಷಗಳಿಂದ ನ್ಯೂಜೆರ್ಸಿಯಲ್ಲಿ ಕನ್ನಡ ಡಿಸ್ಕ್ ಜಾಕಿ **(DJ)** ಆಗುವುದರ ಮೂಲಕ ಪ್ರಸಿದ್ಧಿಯಾಗಿದ್ದಾರೆ. ಈ ಎರಡು ಕ್ಷೇತ್ರಗಳ ಅಪರಿಮಿತ ಅನುಭವ ಕಿಶೋರ್ ಅವರನ್ನು ಒಂದು ಉತ್ತಮ ರೇಡಿಯೋ ಸಂದರ್ಶನಕಾರರನ್ನಾಗಿ ಮಾರ್ಪಡಿಸಿದೆ.

ಕಾರ್ಯಕ್ರಮದ ವಿವರ :

ಹೆಸರು: ಕನ್ನಡ ಕಸ್ತೂರಿ
ಪ್ರಸಾರ ಸಮಯ: ಪ್ರತಿ ಭಾನುವಾರ ಬೆಳಗ್ಗೆ 9 ರಿಂದ 11 ಘಂಟೆವರೆಗೆ
ವಾಹಿನಿ: 89.3 ಅಥವಾ 100.7 ಎಫ್. ಎಂ.
ಅಂತರ್ಜಾಲ: **www.dhoomfm.com**
ದೂರವಾಣಿ: **732 516 0222 (Studio)**

# DHOOM Team with Guests











Charity sees the need not the cause.

# KCOB CHARITY

May 2010 | 5th year anniversary Charity report | Raghavendra Murthy

## We make a living by what we get, but we make a life by what we give. ~Winston Churchill

Karnataka Cultural Organization - Brindavana is a non-profit charitable organization. We are committed to organize at-least one activity benefitting Karnataka and at-least one activity benefitting New Jersey.

### CHARITY ACTIVITIES AT KCO-BRINDAVANA

Since the inception, Brindavana has organized a number of charity activities. An attempt has been made to have a charity drive in our gatherings.

It all started right on the inauguration day wherein donation was made to "Namma Mane" , a charitable trust for old and mentally disabled women. The journey has continued by supporting noted charitable organizations like Sankara Eye Foundation, Akshaya Patra Foundation, etc.

In 2005, we also hosted a show by Samarthanam. Samarthanam is a trust for disabled. All the proceeds collected from the show was donated to Samarthanam.

In the same year, the youth participated in the 5K walk organized by ASHA for education. The Youth along with their parents participated in the event. The youth also visited the Franklin Park Food bank, volunteered for a couple of hours and helped the administrators by organizing the food in the selves.






SANKARA EYE FOUNDATION

AKSHAYA PĀTRA™ Unlimited food for education

....... charity for flood victims, founding donor of an eye hospital, food for eduction, donating food to the local food bank ...





# KCOB CHARITY

The Charity drive continued in 2006 and 2007. Donation of coat drives and food cans were organized in a number of gatherings. Funds were collected and donated to aging actor Late Shri Ashwath.

**2008 - DONATION TO SANKARA EYE FOUNDATION BENEFITTING KARNATAKA -**

In 2008, the Spoorthi tanda decided to support Sankara Eye foundation. It costs $30 to sponsor an eye surgery in India. The Spoorthi tanda set a nominal target to sponsor at-least 25 eye surgeries. A number of events were organized during the 2008 - picnic - Jathre. A Yakshagana poster was used to raise the funds. Further, the Jathre continued as the theme for Brindavana in the 2008 AKKA meravanige. We raised an additional $250. We finally donated **$1,000 to Sankara Eye foundation** and were recognized as a founding donor. Since it was donated in AKKA WKC 2008 conference, the donation was matched.



AKKA 2008 - Spoorthi tanda donating to SEF

**2008 - DONATION TO FOOD BANK BENEFITTING NEW JERSEY -**


In 2008, the Spoorthi tanda decided to support the local community by donating food to the local food bank. The fund raised during Makkalotsava was used to donate food to the Franklin Park food bank. Even though the fund raised was **$140, we were able to donate 113 lb of food**.



Franklin Park Food bank

**2009 - DONATION TO AKSHAYA PATRA FOUNDATION BENEFITTING KARNATAKA -**

In 2008, the Spoorthi tanda decided to support Akshaya Patra foundation. It costs $28 to feed one student per academic year. With a government subsidy, 2 students would be fed for $28. Brindavana had the privilege to showcase "Navagraha", a kannada movie in the local movie theater. The profits was used to sponsor the kids through Akshaya Patra. The charity drive continued in the other cultural events throughout the year. **A total of $3,846 was donated to Akshaya Patra.** We had set a nominal target to sponsor 100 kids in the beginning of the year, but finished at **sponsoring 274 kids**.




Ben and Sadhana with Akshaya Patra

**2009 - DONATION TO FLOOD VICTIMS IN KARNATAKA-**

In 2009, the north Karnataka was affected by torrential rains and massive flooding. Brindavana along with AKKA and Sri Krishna Vrindavana organized a flute concert and donated the proceeds to construct homes for the flood victims. **We donated $2,200 enough to construct one house for flood victims.**



Sri Praveen Godkindi flute concert

**2009 - DONATION TO FOOD BANK BENEFITTING NEW JERSEY -**

Finally during the Makkalotsava, we raised funds to donate food to the local food bank. We were able to raise **$820 and donated 400 lb of food**.

# ನಾ ಕಂಡ ಬೃಂದಾವನ
# ಅಮೇರಿಕನ್ನಡದ ಇತಿಹಾಸದ ಮೈಲಿಗಲ್ಲು...



ರಾಜ್ ಶಶಿ
ಓಲ್ಡ್ ಬ್ರಿಡ್ಜ್, ನ್ಯೂ ಜೆರ್ಸಿ

2004 ನೆಯ ಇಸವಿ ಜುಲೈ 3 ರಂದು ಗಾರ್ಡನ್ ಸ್ಟೇಟ್ ನ್ಯೂಜೆರ್ಸಿಯಲ್ಲಿ ಜನಿಸಿತ್ತು ನಮ್ಮೀ ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ – ಸುಮಧುರ ಸ್ನೇಹ ಸಮ್ಮಿಲನದ ಸೂಜಿಮಲ್ಲಿಗೆಯ ಸುವಾಸನೆಯುಳ್ಳ ಕನ್ನಡದ ಬಳ್ಳಿ ''ಬೃಂದಾವನ''. ಒಂದೇ ಹುಮ್ಮಸ್ಸಿನ ಕನ್ನಡ ಪ್ರೇಮವುಳ್ಳ ಕೆಲವು ನ್ಯೂಜೆರ್ಸಿಯ ಕನ್ನಡದ ಸಂಸಾರಗಳು ಅಂದು ಸಂಜೆ ಶ್ರೀಮತಿ ವಸಂತಾ ಶಶಿಯವರ ಮನೆಯಲ್ಲಿ ಸೇರಿದ್ದರು ಹೀಗೊಂದು ವೈಶಿಷ್ಟ್ಯವಾದ ಬೃಂದಾವನ ಕನ್ನಡ ಸಂಸ್ಥೆಯನ್ನ ಕಟ್ಟಿ ಎತ್ತರಕ್ಕೆ ಬೆಳೆಸುವ ಮಹದಾಸೆಯಲ್ಲಿ.

ನಮ್ಮ ಕರ್ನಾಟಕದ ಸಾಂಸ್ಕೃತಿಕ ನಗರವಾದ ಮೈಸೂರಿನ ''ಬೃಂದಾವನ್ ಗಾರ್ಡನ್'' ಹೆಸರಿನ ಹಿನ್ನಲೆಯಿಟ್ಟುಕೊಂಡು, ಗಾರ್ಡನ್ ಸ್ಟೇಟ್ ಎಂದೇ ಕರೆಯಲ್ಪಟ್ಟ ನ್ಯೂಜೆರ್ಸಿ ನಗರದ ಕನ್ನಡ ಸಂಸ್ಥೆಗೆ ''ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ – ಬೃಂದಾವನ'' ಎಂದು ನಾಮಕರಣವಾಗಿದ್ದು ಹೀಗೆ.

ಬೃಂದಾವನದ ಸ್ವಾಗತಗೀತೆ ಯೊಂದಿಗೆ ಪ್ರಾರಂಭವಾಗಿ, ಹೆಣ್ಣುಮಕ್ಕಳಿಂದ ಬೃಂದಾವನದ ಕನ್ನಡ ದೀಪವು ಬೆಳಗಿ, ಅಮೇರಿಕನ್ ಸ್ವಾತಂತ್ರ್ಯೋತ್ಸವದ ವಾರಾಂತ್ಯವಾದ್ದರಿಂದ ಬೃಂದಾವನದ ಚಿಲಿಪಿಲಿಗಳಿಂದ ಸುರ್ ಸುರ್ ಪಟಾಕೆಯೊಂದಿಗೆ ಉಗಮವಾಗಿತ್ತು ನಮ್ಮೀ ಬೃಂದಾವನ. ತದನಂತರ ಜುಲೈ 21 ರಂದು ನಮ್ಮೀ ಬೃಂದಾವನದ ಅಂತರ್ಜಾಲತಾಣ ತೆರೆಕಂಡಿದ್ದು, ಫ್ಲೋರಿಡಾದ ಸೆಪ್ಟೆಂಬರ್ ಅಕ್ಕ 2004 ಸಮ್ಮೇಳನದಲ್ಲಿ ಬೃಂದಾವನವು ತನ್ನ ಮೊಟ್ಟ ಮೊದಲ ಭರ್ಜರಿ ಕಾರ್ಯಕ್ರಮವನ್ನ ನೀಡಿತು. ಡಿಸೆಂಬರ್ 4 ರಂದು ನ್ಯೂಜೆರ್ಸಿಯ ಬ್ರಿಡ್ಜ್ ವಾಟರ್ ದೇವಸ್ಥಾನದ ಸಭಾಂಗಣದಲ್ಲಿ ಸುಮಾರು 500 ಕ್ಕೂ ಹೆಚ್ಚು ಕನ್ನಡ ಪರಿವಾರಗಳು ಬೃಂದಾವನದ ಬಂಧುಗಳಾಗಿ ಸಮ್ಮಿಲನ ಗೊಂಡು ಭಾರಿ ಪ್ರಮಾಣದಲ್ಲಿ ಆಚರಿಸಿಕೊಂಡಿತ್ತು ಬೃಂದಾವನದ ಭರ್ಜರಿ ಉಧ್ಘಾಟಣೆ ಸಮಾರೋಪ. ಅಂದು ಈ ಸಮಾರಂಭದಲ್ಲಿ ಬೃಂದಾವನದ ಮೊಟ್ಟ ಮೊದಲ ''ವನವಾಣಿ''ಯ ಸ್ಮರಣೆ ಸಂಚಿಕೆಯು ಹೊರಹೊಮ್ಮಿತ್ತು.

2004-06 ಸ್ಥಾಪಕ ಸಮಿತಿಯು ಬೃಂದಾವನದ ಸಂವಿಧಾನವನ್ನ ರಚಿಸಿ ತಳಪಾಯ ಕಟ್ಟಿ, ಮೊದಲ ''ಯುಗಾದಿ ಹಬ್ಬ'', ''ಬೃಂದಾವನ ವಿಹಾರ'' ಹಾಗು ಅನೇಕ ಸಾಂಸ್ಕೃತಿಕ, ಧಾರ್ಮಿಕ ಕೈಂಕರ್ಯದ ಕಾರ್ಯಕ್ರಮವನ್ನ ಯಶಸ್ವಿಯಾಗಿ ನೀಡಿ, ಮಾರನೆ ಏಪ್ರಿಲ್ ತಿಂಗಳ ಯುಗಾದಿಯ ವಸಂತೋತ್ಸವದಲ್ಲಿ ''ನಾಟಕೋತ್ಸವ'' ವನ್ನ ಯಶಸ್ವಿಯಾಗಿ ಆಚರಿಸಿಕೊಂಡಿತಲ್ಲದೆ, ಬೃಂದಾವನದ ಸದಸ್ಯರಗಳಗನುಗುಣವಾಗಿ ತನ್ನ ಮೊಟ್ಟ ಮೊದಲ ಅಕೃತ ಚುನಾವಣೆಯನ್ನು ನಡೆಸಿ, ಶ್ರೀಮತಿ. ವಸಂತಾ ಶಶಿ ಹಾಗು ಡಾ. ರಾಮ್ ಬೆಂಗಳೂರು ಅವರುಗಳನ್ನ 2004-06 ರ ಸಾಲಿನ ಅಧ್ಯಕ್ಷೆ ಹಾಗು ಉಪಾಧ್ಯಕ್ಷರನ್ನಾಗಿ ಆಯ್ಕೆಮಾಡಿತು.

2006-08 ಸಮಿತಿಯು ಶ್ರೀಮತಿ ವಸಂತಾ ಶಶಿ ಅವರ ಅಧ್ಯಕ್ಷತೆಯಲ್ಲಿ ಬೃಂದಾವನದ ಕನ್ನಡದ ಬಳ್ಳಿಯನ್ನ ಅಮೇರಿಕಾದೆಲ್ಲೆಡೆಯಲ್ಲದೆ, ಕರ್ನಾಟಕದಲ್ಲೂ ಹೆಸರುವಾಸಿಯಾಗಿ ಎತ್ತರಕ್ಕೆ ಬೆಳೆಸುವ ಸಲುವಾಗಿ ಹಾಗು ಬೃಂದಾವನದ ಪ್ರತಿಯೊಂದು ಕಾರ್ಯಕ್ರಮಕ್ಕೂ ಪ್ರಾಯೋಜಕರನ್ನ ಕರೆತಂದು ಅವರುಗಳ ಅರ್ಥಿಕ ಸಹಾಯದಿಂದ ಅನೇಕನೇಕ ವೃತ್ತಿಪರ ಕಾರ್ಯಕ್ರಮಗಳು ಸ್ಥಳೀಯ ಹಾಗು ಕರ್ನಾಟಕದ ಕಲಾವಿದರುಗಳನೊಳಗೊಂಡು, ''9 ಹಂತದ ನವರಾತ್ರಿಬೊಂಬೆಗಳ ಪ್ರದರ್ಶನ '', ಎರಡು ಬಾರಿ ಬೃಂದಾವನದ ಸಭಿಕರನ್ನೆಲ್ಲಾ ಒಳಗೊಂಡು ನಡೆಸಿದ ''ನಾನ್ ಸ್ಟಾಪ್ ಭರ್ಜರಿ ಕನ್ನಡ ಕೋಲಾಟ'', ''ದೋಸಪಾರ್ಟಿ ಬೃಂದಾವನವಿಹಾರ'' ಮತ್ತು ''108

ಕಾರ್ಯಕ್ರಮಗಳನ್ನ ಬೃಂದಾವನದ ಯುವಕ ಯುವತಿಯರ ನಿರೂಪಣೆಯಲ್ಲಿ ಅತ್ಯಂತ ಯಶಸ್ವಿಯಾಗಿ ಆಚರಿಸಿಕೊಂಡಿತ್ತು. ಈ ಸಮಾರಂಭಗಳಲ್ಲಿ ಎರಡನೇ ''ಬೃಂದಾವನವಾಣಿ'' ಸ್ಮರಣ ಸಂಚಿಕೆ ಹಾಗು ಮೊದಲನೇ ''ಬೃಂದಾವನ ಸುದ್ದಿಸಾರಂಗಿ'' ಸಾಪ್ತಾಹಿಕ news ಗಳನ್ನ ಅಂದಿನ ಮುಖ್ಯ ಅತಿಥಿಗಳಾಗಿದ್ದ ರಾಷ್ಟ್ರಕವಿ ಕುವೆಂಪು ಅವರ ಮಗಳು ತಾರಿಣಿ ಹಾಗು ಅಳಿಯ ಕುವೆಂಪು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ. ಚಿದಾನಂದ ಗೌಡ ಅವರುಗಳಿಂದ ಬಿಡುಗಡೆ ಮಾಡಲಾಗಿತ್ತು. ಇಷ್ಟೇ ಅಲ್ಲದೆ, ಈ ಭಾರಿ ಪ್ರಮಾಣದ ಕಾರ್ಯಕ್ರಮಗಳ ಮೂಲಕ ಧಾರ್ಮಿಕ ದೃಷ್ಟಿಯುಳ್ಳ ಸಂಸ್ಥೆಗಳಿಗೆ ಅರ್ಥಿಕವಾಗಿ ತನ್ನ ಅಳಿಲು ಸೇವೆ ಸಲ್ಲಿಸಿತಲ್ಲದೆ, ಬೃಂದಾವನವನ್ನ ಒಂದು ''ಲಾಭ ರಹಿತ'' 501(4) ಸಂಸ್ಥೆಯನ್ನಾಗಿ ಪರಿವರ್ತಿಸಿತು. ಬೃಂದಾವನ ತನ್ನ ಅಸ್ತಿತ್ವವನ್ನ ಇಮ್ಮಡಿಗೊಳಿಸಲು, ತನ್ನ ಧ್ವನಿವರ್ಧಕ ಸಲಕರಣೆಗಳನ್ನ sound system equipement ಪ್ರಾಯೋಜಕರ ಸಹಾಯದಿಂದ ಆಸ್ತಿಯನ್ನಾಗಿಸಿಕೊಂಡಿತು. ಮೇ ತಿಂಗಳ ಯುಗಾದಿಯ ವಸಂತೋತ್ಸವದಲ್ಲಿ ಬೃಂದಾವನ ತನ್ನ ಮೊಟ್ಟ ಮೊದಲ ''ಈಶಾನ್ಯ ಕನ್ನಡಕೂಟಗಳ ಸಮಾರೋಪ''ವನ್ನ ನೆರೆಯ ನಾಲ್ಕೈದು ಕನ್ನಡಕೂಟಗಳನ್ನೊಳಗೊಂಡು ನಾಟಕೋತ್ಸವವನ್ನ ವಿಜೃಂಭಣೆಯಿಂದ ಆಚರಿಸಿದ ಕೀರ್ತಿಗೆ ಭಾಜನವಾಯ್ತು.

2008-10 ರ ಸಾಲಿನಲ್ಲಿ ''ಸ್ಫೂರ್ತಿ'' ತಂಡ ವೆಂಬ ಸಮಿತಿಯು ಶ್ರೀಮತಿ ಉಷ ಪ್ರಸನ್ನಕುಮಾರ್ ಅವರ ಅಧ್ಯಕ್ಷತೆಯಲ್ಲಿ ರಚಿತಗೊಂಡು, ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೃಂದಾವನವನ್ನ ಬೆಳೆಸುವ ಸಲುವಾಗಿ, ಹಲವಾರು ಸ್ಥಳೀಯ ಮಕ್ಕಳ ಕಾರ್ಯಕ್ರಮ ಹಾಗು ಕರ್ನಾಟಕದ ಕಲಾವಿದರುಗಳನೊಳಗೊಂಡ ಅನೇಕ ವೃತ್ತಿ ಪರ ಸಾಂಸ್ಕೃತಿಕ ಕಾರ್ಯಕ್ರಮ, ಜಾತ್ರೆ ಶೈಲಿಯಲ್ಲಿ ''ಬೃಂದಾವನವಿಹಾರ'', ''ಗಣೇಶೋತ್ಸವ'', ''ಮಕ್ಕಳ ದಿನಾಚರಣೆ'' ಕಾರ್ಯಕ್ರಮಗಳನ್ನ ಅತ್ಯಂತ ಯಶಸ್ವಿಯಾಗಿ ಆಚರಿಸಿಕೊಂಡಿತಲ್ಲದೆ, ತನ್ನ 5 ನೇ ವರ್ಷದ ವಾರ್ಷಿಕೋತ್ಸವದ ಸಲುವಾಗಿ ಎರಡನೆಯ ''ಈಶಾನ್ಯ ಕನ್ನಡಕೂಟಗಳ ನಾಟಕೋತ್ಸವ ಸಮ್ಮೇಳನ''ವನ್ನ ಪ್ರಾಯೋಜಕರ ಸಹಾಯದಿಂದ ಅತ್ಯಂತ ಯಶಸ್ವಿಯಾಗಿ ನಡೆಸಿ, ಹತ್ತು ಹಲವಾರು ಧಾರ್ಮಿಕ ಕೈಂಕರ್ಯದ ಕಾರ್ಯಕ್ರಮಗಳನ್ನ ಕೈಗೊಂಡ ಕೀರ್ತಿಗೆ ಭಾಜನವಾಗಿದೆ. ಇಷ್ಟೇ ಅಲ್ಲದೆ, ಬೃಂದಾವನವೆಂಬ ಕನ್ನಡದ ಬಳ್ಳಿ ತನ್ನನ್ನು ಮತ್ತಷ್ಟು ಹೆಮ್ಮರವಾಗಿ ಬೆಳೆಸಿಕೊಳ್ಳುವ ಸಲುವಾಗಿ, ತನ್ನ ಐದನೇ ವರ್ಷದಲ್ಲೇ , ಮಕ್ಕಳ 6ನೆಯ ಸಮ್ಮೇಳನದ ಸಾರಥ್ಯವನ್ನ ತನ್ನ ಹೆಗಲಿಗೆ ಹೊತ್ತು, ಎಲ್ಲೂ, ಎಂದೂ ಕಾಣದ ಅತಿಶಯ ಅದ್ದೂರಿಯ ಅಕ್ಕ ಕನ್ನಡ ಅಗರವನ್ನ ತನ್ನ ಸುತ್ತಮುತ್ತಲಿನ ಕನ್ನಡ ಕೂಟಗಳನ್ನೊಳಗೊಂಡು ಆಚರಿಸುವ ಪಣ ತೊಟ್ಟಿರುವುದು ಹೆಗ್ಗಳಿಕೆಯ ಕೈಂಕರ್ಯವೆಂದರೂ ಅಚ್ಚರಿಯಿಲ್ಲ!


ತನ್ನ ಕಿರು ವಯಸ್ಸಿನಲ್ಲೆ ಅಧ್ಭುತ ಸಾಧನೆಯ ಕೀರ್ತಿಗೆ ಭಾಜನವಾಗಿರುವ ಬೃಂದಾವನದ ಪ್ರತಿಯೊಂದು ಕೈಂಕರ್ಯಕ್ಕೆ ಬೃಂದಾವನದ ಸಕುಟುಂಬ ಪರಿವಾರಗಳ ಸುಮಧುರ ಸ್ನೇಹ ಸಮ್ಮಿಲನದ ಶುಭಹಾರೈಕೆ ಹಾಗು ಕನ್ನಡ ಪ್ರೇಮವುಳ್ಳ ಪ್ರತಿಯೊಬ್ಬ ವಿಶ್ವಕನ್ನಡಿಗರೆಲ್ಲರ ಹಾರೈಕೆಯೊಂದಿಗೆ ಶುಭವಾಗಲಿ.

## ಬೃಂದಾವನದ ಕನ್ನಡ ಬಳ್ಳಿಯ ಸಂಭ್ರಮದ ಇತಿಹಾಸದ ಮೈಲಿಗಲ್ಲು ನೆನೆಪಿನ ಚಿತ್ರಪಟ



# *Brindavana*

*- Sadhana Shankar*



Since about 5 years, Brindavana has been like a life line for Kannadigas of NJ for all their social and cultural activities. Though we had Kannada associations like Kannada Koota of New York & Triveni, the participation of members from NJ was always difficult due to commuting problems and hence was always with a limited participation from New Jersey kannadigas. To overcome this, all like-minded people  contemplated to form an association of our own so that we could meet on a regular basis & this thought gave birth to Brindavana. It gives me immense happiness that I am one of the founding members of Brindavana. Since inception, Brindavana has been growing stronger day by day. The main idea for promoting Brindavana is to establish a common platform for all Kannadigas for their social get together, promotion of cultural activities, induct & inculcate Kannada culture among our young ones and perform social & charitable works. I feel that we have fairly succeeded in our endeavor. Over these past 5 years, we have successfully conducted various get-together programs like "Makkalotsava", "Vasantotsava" "Ganeshotsava", "picnics", Deepavali, Rajyothsava celebrations. I have also been very active on the charitable works. In the past, we identified and have contributed to Sankara Eye Foundation. Presently we have identified "Akshaya Patre" for our charitable contributions. This apart we had a number of music programs provided by local and visiting Kannada artists. We have a great sense of happiness and satisfaction that Brindavana has a conglomeration of fun, religion, culture, social and charitable activities. As an active member of Brindavana, I want to increase the member base and increase our activities. Increasing the member base has been one of the important and tough tasks on us. I have been constantly promoting at every possible meet that I take part in and this is an ongoing task. We are planning to conduct a series of sponsored cultural shows, thought provoking discourses by reputed artists to attract more and more Kannadigas into Brindavana fold. We have also been seriously contemplating on creating a corpus fund to help deserving poor Kannada children for their education and well-being. I sincerely hope that we will be successful in our attempt to make Brindavana a role model association.

HEARTY CONGRATULATIONS AND ALL THE BEST FOR FUTURE GROWTH
SADHANA, SHANKAR, SUKRUTHA, SWEEKRUTHA

*Hearty Congratulations &*
*All The Best For Future Growth*

SADHANA, SHANKAR, SUKRUTHA, SWEEKRUTHA

# ಬೃಂದಾವನ

ಸಂತೋಷ್ ಕುಮಾರ್ ಕಡ್ಲೇಬೇಳೆ



ಆತ್ಮೀಯ ಕನ್ನಡಾಭಿಮಾನಿಗಳೇ, ನಿಮಗೆಲ್ಲ ನ್ಯೂ ಜೆರ್ಸಿಯ ಕನ್ನಡ ಸಾಂಸ್ಕೃತಿಕ ಸಂಘಟನೆ ಬೃಂದಾವನದ 5 ನೇ ವಾರ್ಷಿಕೋತ್ಸವಕ್ಕೆ ಅದರ ಗೌರವಾನ್ವಿತ ನಿರ್ದೇಶಕನಾದ ಸಂತೋಶ್ ಕುಮಾರ್ ಕಡ್ಲೇಬೇಳೆ ಮಾಡುವ ಹಾರ್ದಿಕ ಶುಭಾಶಯಗಳು.

ಸುಮಾರು ಐದು ಶತಮಾನಗಳಾಚೆ ಯುರೋಪ್ ಖಂಡದ ಸಾಹಸಿಗರಿಂದ ಕತ್ತಲೆಯ ನಾಡೆಂದು ಪರಿಚಯಿಸಲ್ಪಟ್ಟು ಸುಮಾರು ಎರಡೂವರೆ ಶತಮಾನಗಳಿಂದ ಪ್ರಜಾಪ್ರಭುತ್ವವನ್ನು ಕಂಡು ಸ್ವಾಮಿ ವಿವೇಕಾನಂದರಿಂದ ವಿಶ್ವ ಭ್ರಾತೃತ್ವದ ವೀರವಾಣಿಗೆ ಎಚ್ಚರಗೊಂಡು ಈಗ ಜಗತ್ತಿನ ಪ್ರಭಾವಶಾಲಿ ರಾಷ್ಟ್ರವೆಂದು ಕರೆಸಿಕೊಳ್ಳುತ್ತಿರುವ ಅಮೇರಿಕಾದಲ್ಲಿ, ನಮ್ಮ ಕನ್ನಡ ನಾಡಿನ ಹಿರಿಮೆಯ ಸಂಸ್ಕೃತಿ, ಆಧ್ಯಾತ್ಮ, ಧ್ಯಾನ, ಯೋಗ, ಕಲೆ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸುವ ಪ್ರಯತ್ನವನ್ನು ಕನ್ನಡ ತಾಯಿಯ ಮಕ್ಕಳಾದ ನಾವೆಲ್ಲ ಮಾಡುತ್ತಿದ್ದೇವೆ.

ಈ ಧ್ಯೇಯವನ್ನು ಗುರಿಯಾಗಿ ಇರಿಸಿಕೊಂಡ ಬೃಂದಾವನ ಸಂಘದಲ್ಲಿ 2006 ರಿಂದ ಸದಸ್ಯನಾಗಿ ಕೆಲಸ ಮಾಡುತ್ತಾ ಇರುವುದು ನನಗೆ ಹೆಮ್ಮೆಯ ವಿಷಯ. ವಿಶ್ವ ಪ್ರಸಿದ್ಧ ಇಂಜಿನೀಯರ್ ಸರ್. ಎಮ್. ವಿಶ್ವೇಶ್ವರಯ್ಯನವರ ಅನನ್ಯ ಸಾಧನೆಯ ಪ್ರತೀಕವಾಗಿ ಕೃಷ್ಣರಾಜ ಸಾಗರದ ಬೃಂದಾವನವು ಪ್ರವಾಸಿಗರ ಆನಂದಾನುಭೂತಿಯನ್ನು ತನ್ನ ನಯನ ಮನೋಹರ ಕಾರಂಜಿಯ ಮೂಲಕ ಪ್ರಕಟಿಸುತ್ತಿದೆ. ಹಾಗೆಯೇ ನ್ಯೂ ಜೆರ್ಸಿಯ ಬೃಂದಾವನವು ನಮ್ಮ ಜೀವನೋತ್ಸಾಹವೆಂಬ ಕಾರಂಜಿಯನ್ನು ಪುಟಿಸುತ್ತಿರುವ ತಾಣ. ನಾವೆಲ್ಲ ಕನ್ನಡಿಗರು ಇಲ್ಲಿ ವಸಂತಕಾಲದ ವೈಭವವನ್ನು ವಸಂತೋತ್ಸವ ಆಚರಿಸುವ ಮೂಲಕ ಸಂಭ್ರಮಿಸುತ್ತೇವೆ. ನಮ್ಮ ಪ್ರಮುಖ ಹಬ್ಬಗಳಾದ ಗಣೇಶೋತ್ಸವ, ಯುಗಾದಿ, ದೀಪಾವಳಿ ಹಬ್ಬವನ್ನು ಆಚರಿಸುವುದರ ಮೂಲಕ ನಮ್ಮ ಹಿಂದಿನ ಪರಂಪರೆಯನ್ನು ಮುಂದಿನ ಪೀಳಿಗೆಯವರಿಗೆ ಮುಂದುವರಿಸಲು ಪ್ರೋತ್ಸಾಹಿಸುತ್ತೇವೆ. ಹೊರನಾಡಿನಲ್ಲಿದ್ದರೂ ರಾಷ್ಟ್ರೀಯತೆಯನ್ನು ಜೀವಂತವಾಗಿರಿಸುವ ಕಾಯಕ ಮುಂದುವರೆಸಿದ್ದೇವೆ. ಯುವ ಪೀಳಿಗೆಯವರೊಂದಿಗೆ ಸೇರಿಕೊಂಡು ಮಕ್ಕಳ ದಿನಾಚರಣೆಯಲ್ಲಿ ನಮ್ಮ ಬಾಲ್ಯದ ಸವಿನೆನಪುಗಳನ್ನು ಸವಿಯುತ್ತೇವೆ.

ಬೃಂದಾವನದ ಪ್ರತಿ ಉತ್ಸವದಲ್ಲಿ ಸಾಂಸ್ಕೃತಿಕ ಮನರಂಜನೆಯ ಜೊತೆಗೆ ಕರ್ನಾಟಕದ ವಿವಿಧ ರೀತಿಯ ತಿಂಡಿ–ತಿನಿಸುಗಳಾದ ಒಬ್ಬಟ್ಟು, ಪಾಯಸ, ಬಿಸಿಬೇಳೆ ಬಾತ್, ಹುಳಿ, ಬೋಂಡಾ, ಉಪ್ಪಿಟ್ಟು, ಪಲ್ಯ, ಚಪಾತಿ ಮೊದಲಾದ ಆಹಾರ ಪದಾರ್ಥಗಳನ್ನು ಉಣಬಡಿಸುತ್ತಾ, ಗೌರವ ನಿರ್ದೇಶಕನಾಗಿ ನಾನು ಉಟೋಪಚಾರಗಳ ಉಸ್ತುವಾರಿಯನ್ನು ಸ್ವಯಂ ಸೇವಕರ ಸಹಾಯದಿಂದ ಮಾಡುತ್ತಿರುವುದು ಬಹಳ ಸಂತೋಷವನ್ನು ತಂದುಕೊಟ್ಟಿದೆ.

ಈ ವರ್ಷದ ಸೆಪ್ಟೆಂಬರ್ 3, 4, 5 ರ ಆರನೆಯ ವಿಶ್ವ ಕನ್ನಡ ಸಮ್ಮೇಳನವು ಬೃಂದಾವನದ ಆಶ್ರಯದಲ್ಲಿ ನಡೆಸುತ್ತಿರುವುದು ಹೆಮ್ಮೆಯ ವಿಚಾರ. ಈ ಮಹಾ ಸಮ್ಮೇಳನದ ಮುಖ್ಯ ಕಾರ್ಯಕಾರಿ ಸಮಿತಿಯಲ್ಲಿ ಖಜಾಂಜಿಯಾಗಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟ ಬೃಂದಾವನದ ಸ್ಪೂರ್ತಿ ತಂಡಕ್ಕೆ ನನ್ನ ಅನಂತ ಧನ್ಯವಾದಗಳು. ಈ ಮಹಾ ಸಮ್ಮೇಳನ ಯಶಸ್ವಿಯಾಗಿಸಲು ಸಮಸ್ತ ಕನ್ನಡಿಗರ ಸಹಾಯ ಸಹಕಾರವನ್ನು ಯಾಚಿಸುತ್ತೇನೆ.

ಜೈ ಕರ್ನಾಟಕ, ಜೈ ಹಿಂದ್

# ಬೀಳದೇ ಏಳೋದಾದರೂ ಹೇಗೆ?

ಸತೀಶ್ ಹೊಸನಗರ
http://antaranga.blogspot.com/



ಹೀಗೇ ಒಂದು ಛಳಿಗಾಲದ ದಿನ, ಮಧ್ಯಾಹ್ನ ಆಗಿ ಸಂಜೆ ನಾಲ್ಕು ಘಂಟೆ ಹೊತ್ತಿಗೆಲ್ಲಾ ಅದನ್ನು ದಿನ ಎನ್ನಬೇಕೋ, ಕತ್ತಲು ಎನ್ನಬೇಕೋ ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳಬಹುದಾದಂತಹ ಮಸುಕು ಮುಸುಕಿದ ಮುಸ್ಸಂಜೆ. ಈಗಲೋ ಆಗಲೋ ಉಸಿರು ಕಳೆದುಕೊಂಡು ಹೋಗೇ ಬಿಟ್ಟ ಎನ್ನುವ ಸೂರ್ಯನನ್ನು ಸಂತೈಸುವ ಹಾಗೆ ಅಲ್ಲಲ್ಲಿ ಬಿದ್ದುಕೊಂಡು ಛಳಿಗೆ ಗಟ್ಟಿಯಾಗಿ ಮುಖ ಸಿಂಡರಿಸಿಕೊಂಡ ಹಿಮದ ತುಕುಡಿಗಳು ತಮ್ಮ ಮೇಲೆ ಬಿದ್ದ ಬೆಳಕನ್ನು ಪ್ರತಿಫಲಿಸಿ ಬೆಳಕಿನ ಸೈನಿಕರ ಉತ್ಸಾಹ ಕತ್ತಲಿನ ಶತ್ರುಗಳ ಎದುರು ಸಂಪೂರ್ಣವಾಗಿ ಕಳೆದು ಹೋಗದ ಹಾಗೆ ಕಾಪಾಡಿಕೊಂಡಿದ್ದವು. ಯಾವತ್ತಿನಂತೆ ರಸ್ತೆಗಳು ಊರ್ಧ್ವಮುಖಿಗಳಾಗಿ ತಮ್ಮನ್ನು ತಾವು ಸೇವೆಗೆ ಒಪ್ಪಿಸಿಕೊಂಡಿದ್ದರೂ ಕಪ್ಪಗಿನ ರಸ್ತೆಗಳ ಮೇಲೆ ಬೂದಿ ಬಳಿದುಕೊಂಡ ಹಾಗಿನ ಛಾಯೆ ಯಾಕೋ ಮುಂಬರುವ ಕೆಟ್ಟದ್ದನ್ನು ತಾವು ಬಲ್ಲೆವು ಎಂಬಂತೆ ಅಜ್ಜ-ಮುತ್ತಾತರ ಭಂಗಿಯಲ್ಲಿ ಇದ್ದವು. ನಮ್ಮ ಮನೆಯ ಡ್ರೈವ್ ವೇ ತನ್ನ ಮೇಲಿನ ಅರ್ಧ ಇಂಚು ದಪ್ಪಗಿನ ಐಸ್ ಲೇಯರ್‌ನ ಅವಶೇಷಗಳಡಿಯಲ್ಲಿ ಸಮಾಧಿಯಾಗಿತ್ತು, ನಮ್ಮ ಮನೆಯ ಮೇಲ್ ಬಾಕ್ಸ್ Mohawk Indian ಹೇರ್ ಸ್ಟೈಲ್ ಮಾಡಿಕೊಂಡು ತನ್ನ ಮೇಲೆ ಒಂದು ರೀತಿಯ ಚೂಪನೆ ಐಸ್ ಪದರವನ್ನು ನಿರ್ಮಿಸಿಕೊಂಡಿತ್ತು, ಅದರ ಬುಡದಲ್ಲಿ ಲಾಲಿ ಪಾಪ್ ನೆಕ್ಕಿ ಬಣ್ಣದ ಜೊಲ್ಲು ಸುರಿಸುವ ಮುಗ್ಧ ಮಗುವಿನಂತೆ ಬಿಸಿಲಿಗೆ ಕರಗಿ ಐಸ್ ನೀರಾಗುತ್ತ ನೀರಾಗುತ್ತ ಹನಿಗಳು ಅಲ್ಲಲ್ಲಿ ಹೆಪ್ಪು ಕಟ್ಟಿಕೊಂಡು ಮೇಲ್ ಬಾಕ್ಸ್ ಸಂರಕ್ಷರ ಹಾಗಿನ ಚೂಪುಗಳನ್ನು ನಿರ್ಮಿಸಿಕೊಂಡಿದ್ದವು.

ಬ್ಲೂಮ್‌ಬರ್ಗ್ ರೇಡಿಯೋದಲ್ಲಿ ಮಾರ್ಕೆಟ್ ಬಿದ್ದ ಬಗ್ಗೆ ಅರಚಿಕೊಳ್ಳುತ್ತಿದ್ದರು, ಈಗಾಗಲೇ ನೀರಲ್ಲಿ ಮುಳುಗಿದೋನಿಗೆ ಮಳೆಯೇನು ಛಳಿಯೇನು ಎನ್ನುವ ಧೋರಣೆಯನ್ನು ತಾಳಿಕೊಂಡ ಜನರಿಗೆ ಇವರೆಲ್ಲ ಮತ್ತಿನ್ನಷ್ಟು ಹೆದರಿಸಲು ವ್ಯರ್ಥವಾಗಿ ಪ್ರಯತ್ನಿಸುತ್ತಿದ್ದಾರಲ್ಲ ಎನ್ನಿಸಿತು. ಈ ಅರಚುವ ರೇಡಿಯೋ ಧ್ವನಿಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ 'ಬಿಸಿಲೇ ಇರಲಿ, ಮಳೆಯೇ ಇರಲಿ, ಕಾಡಲ್ಲಿ ಮೇಡಲ್ಲಿ ಅಲೆವೆ?' ಎನ್ನುವಂತೆ ಎದುರು ಮನೆ ಮಕ್ಕಳು ಕೊರೆಯುವ ಛಳಿಯನ್ನೂ ನಿರ್ಲಕ್ಷಿಸಿ ಸ್ಲೆಡ್ಡಿಂಗ್ ಆಡುತ್ತಿದ್ದರು, ಅವರ ನಗುವಿನಲ್ಲಿ ಯಾವುದೇ ಒತ್ತಡವಿದ್ದ ಹಾಗಿರಲಿಲ್ಲ. ನಮ್ಮ ಮನೆಯ ಮುಂದೆ ಹಾಗೂ ಹಿತ್ತಲಿನ ಮರಗಳು ಅಲುಗಾಡಲೂ ಸಂಕೋಚಗೊಂಡವರಂತೆ ಸ್ಥಿರವಾಗಿ ನಿಂತಿದ್ದವು, ನಿತ್ಯಹರಿದ್ವರ್ಣಗಳಂತೂ ಈ ಟ್ಯಾಕ್ಸ್ ಸೀಜನ್ನ್‌ನಲ್ಲಿ ಎಲ್ಲಿ ನಕ್ಕರೆ ಅದಕ್ಕೆ ಟ್ಯಾಕ್ಸ್ ಹಾಕಿ ಬಿಡುತ್ತಾರೋ ಎಂದು ಬಾಯನ್ನು ಹೊಲಿದುಕೊಂಡವರಂತಿದ್ದವು.

ಮನೆಯ ಟ್ರ್ಯಾಷ್ ಕ್ಯಾನುಗಳನ್ನು ಎತ್ತಿಡುತ್ತಾ ನಾನು 'ನಿಧಾನವಾಗಿ ನಡೆಯಬೇಕು, ಬಿದ್ದರೆ ಅಷ್ಟೇ ಗತಿ?' ಎಂದು ಏನೇನೆಲ್ಲ ಮನಸ್ಸಿನಲ್ಲಿ ಅಂದುಕೊಂಡರೂ, ಅಂದುಕೊಂಡವುಗಳು ಪ್ರಯೋಜನಕ್ಕೆ ಬಾರವು ಏನಿದ್ದರೂ ಕ್ರಿಯಾಶೀಲತೆ ಮುಖ್ಯ ಎನ್ನುವ ವಿಧಿ ಕಣ್ಣು ತೆರೆದು ಕಣ್ಣು ಬಿಡುವಷ್ಟರಲ್ಲಿ ನನ್ನ ಕಾಲುಗಳು ತಲೆಗಿಂತ ಮೊದಲು ಹೋಗತೊಡಗಿ ದೊಪ್ಪನೆ ಜಾರಿ ಬಿದ್ದದ್ದಾಯಿತು. ಕೈ ಊರಿ ಎದ್ದು, ಮೈ ಕೈ ಕೊಡವಿಕೊಂಡು ಸುಧಾರಿಸಿಕೊಳ್ಳುತ್ತಾ ಸದ್ಯ ಯಾವುದೇ ಎಲುಬು ಮುರಿಯಲಿಲ್ಲ ಎಂದು ಸಮಾಧಾನ ಪಡುವಂತಾಯಿತು. ಕತ್ತಲಿನ ದಯೆಗೆ ನಾನು ನೆಲಕ್ಕೆ ಅಪ್ಪಳಿಸಿದ ದೃಶ್ಯ ಜನಜನಿತವಾಗಲಿಲ್ಲ. ನೆಲದಲ್ಲಿನ ಐಸ್ ಪದರ ನಮಗೇನೂ ಆಗಿಲ್ಲ ಎಂದು ಬೀಗಿದಂತೆ ಕಾಣಿಸಿತು. ನಾನು ಚೆಲ್ಲಾಪಿಲ್ಲಿಯಾದ ಟ್ರ್ಯಾಷ್ ಕ್ಯಾನ್‌ಗಳನ್ನು ಮತ್ತೆ ಎತ್ತಿಟ್ಟು ಕೆಲಸ ಮುಂದುವರೆಸಿದೆ.

ಈ ಏಳು-ಬೀಳುಗಳು ಸಹಜ, ಆದರೆ ವಯಸ್ಸಾಗುತ್ತಾ ಬಂದ ಹಾಗೆ ಬೀಳುಗಳ ಬಗ್ಗೆ ಗಮನಕೊಡಬೇಕಾಗುತ್ತದೆ, ಎಲ್ಲ ಬೀಳುಗಳೂ ಏಳುಗಳಲ್ಲಿ ಕೊನೆಯಾಗಬೇಕು ಎಂದೇನೂ ಇಲ್ಲ. ಬಹಳ ಸರಳವಾದ ಸಿದ್ಧಾಂತ, ರಿಸ್ಕ್ ತೆಗೆದುಕೊಳ್ಳಬೇಕು ಎನ್ನುವುದು ಸರಿ, ಆದರೆ ಹೆಚ್ಚಿನ ರಿಟರ್ನ್ ಬಯಸಿದಂತೆ ಅಲ್ಲಿ ರಿಸ್ಕ್ ಹೆಚ್ಚಾಗುತ್ತದೆ, ಎಲ್ಲರಿಗೂ ಎಲ್ಲ ರಿಸ್ಕ್ ಟೇಕಿಂಗ್ ಸ್ಟ್ರಾಟೆಜಿ ಅನ್ವಯಿಸುವುದಿಲ್ಲ, ಕೆಲವೊಮ್ಮೆ ಸೇಫ್ಟಿ ಫರ್ಸ್ಟ್ ಎಂದುಕೊಂಡು ಯಾವುದು ನಮ್ಮ ಹಿತರಕ್ಷಣೆಯನ್ನು ಮಾಡಬಹುದೋ ಅಂತಹ ಹೂಡಿಕೆಯನ್ನು ಮಾಡುವುದು

ಒಳ್ಳೆಯದು. ಇವೆಲ್ಲ ಗುಡ್ ಎಕನಾಮಿಕ್ಸ್ ಇಂಡಿಕೇಟರುಗಳು, ಹೂಡಿಕೆಯ ಮೂಲಭೂತ ಅಂಶಗಳು ಇವುಗಳ ಬಗ್ಗೆ ಅದೆಷ್ಟೇ ಪಬ್ಲಿಷ್ ಆಗಿದ್ದರೂ ಸಹ ಬೀಳುವವರು ಮಾತ್ರ ಕಡಿಮೆಯಾಗೋದಿಲ್ಲ. ಅದರಲ್ಲೂ ನನ್ನಂತಹವರು ಎಲ್ಲವನ್ನು ತಮ್ಮಷ್ಟಕ್ಕೇ ತಾವೇ ಅನುಭವಿಸಿ ನೋಡುತ್ತೇವೆ ಎಂದು ಕಂಕಣ ತೊಟ್ಟುಕೊಂಡಿರುವಾಗ? ಯಾವ ಉಪದೇಶ ಎಲ್ಲಿಯ ಲೆಕ್ಕ ಬಿಡಿ. ಬೀಳದೇ ಏಳೋದಾದರೂ ಹೇಗೆ? ಒಮ್ಮೆ ಬಿದ್ದ ಅನುಭವದ ಲೆಕ್ಕಕ್ಕೆ ಮತ್ತೆ-ಮತ್ತೆ ಮೇಲೆ ಹೋಗುವ ರಿಯಾಯತಿ ಸಿಗಬಹುದೇ? ಬಿದ್ದರೆ ಮಾತ್ರ ಏಳಲು ಬಿಡುತ್ತೇನೆ ಎನ್ನುವ ಆಟದ ನಿಯಮಗಳನ್ನು ಯಾರು ಬರೆದವರು? ಅದನ್ನೇಕೆ ನಾವು ಒಪ್ಪಿಕೊಳ್ಳಬೇಕು? ಈ ಒಪ್ಪಿಕೊಳ್ಳದ ನಿಯಮಕ್ಕೆ ಬೀಳುವ-ಏಳುವ ಅನುಪಾತಗಳನ್ನಾದರೂ ಸಮತೂಕ ಮಾಡಬೇಕು ಎನ್ನುವ ಹಂಬಲವೇಕಿಲ್ಲ? ಕೆಟ್ಟ ಮೇಲೆ ಬುದ್ದಿ ಬಂದದ್ದು ಎಲ್ಲಿ ಹೋಯಿತು, ಅದು ಮತ್ತೆ-ಮತ್ತೆ ನಮ್ಮನ್ನು ಬೀಳದಂತೆ ತಡೆಹಿಡಿಯೋದರಲ್ಲಿ ವಿಫಲವಾಗೋದೇಕೆ?

ಬಿದ್ದರೆ ಹಾಗಾಗುತ್ತದೆ ಹೀಗಾಗುತ್ತದೆ ಎನ್ನುವ ಮಧ್ಯಮ ವರ್ಗದ ಕೊರಗುಗಳು ಎದ್ದ ಮೇಲಾಗಬಹುದಾದ ಸಂಭ್ರಮದ ಸಂತೋಷವನ್ನು ಕಸಿದುಕೊಂಡು ಬಿಡುತ್ತವೆ. ನೆಲವನ್ನು ಬಿಟ್ಟು ಮೇಲೇರದ ಮಧ್ಯಮ ವರ್ಗದ ಬಂಧನಗಳು ಎದ್ದು ಹಾರಾಡಬಹುದಾದ ಮನದ ಸ್ವಾತಂತ್ರ್ಯವನ್ನು ಸೀಮಿತಗೊಳಿಸಿ ಗೂಟಕ್ಕೆ ಕಟ್ಟಿದ ತುಡುಗು ದನದ ಮೂಗುದಾರದಂತೆ ಸುತ್ತಿಕೊಂಡುಬಿಡುತ್ತವೆ. ಇವತ್ತಿಲ್ಲದಿದ್ದರೆ ನಾಳೆ, ಇಂದಲ್ಲದಿದ್ದರೆ ಮುಂದೆ ಎನ್ನುವ ಆಶಾವಾದ ತಿಪ್ಪೆ ಸಾರುವ ಸಗಣಿಯಾಗುತ್ತದೆ. ಮುಂದಿನ ಜನ್ಮದಲ್ಲಿ ಮಾಡಿದರೆ ಆಯಿತು ಎನ್ನುವುದು ನನಗದು ಬೇಕೇ ಬೇಕು ಎಂದು ಹಠ ಹಿಡಿದ ಮಗುವಿಗೆ ನಾಳೆ ಕೊಡುತ್ತೇನೆ ಎಂದು ಸಾಂತ್ವನ ಹೇಳುವ ಒಣ ತತ್ವವಾಗುತ್ತದೆ. ಏನೆಲ್ಲವನ್ನು ಮಾಡಬೇಕು ಎನ್ನುವ ಉನ್ಮಾದ ಏನೂ ಮಾಡಿಲ್ಲವಲ್ಲ ಎನ್ನುವ ಉದ್ವೇಗದ ರಭಸದಲ್ಲಿ ಕೊಚ್ಚಿಕೊಂಡು ಹೋಗುವ ಪ್ರವಾಹದ ನೀರಿನ ಒಂದು ಭಾಗವಾಗುತ್ತದೆ. ಅವರವರ ತೂಕಕ್ಕೆ ಅವರವರ ಸಾಮರ್ಥ್ಯಕ್ಕೆ ಬೀಳದೇ ಎದ್ದೋ ಅಥವಾ ಎದ್ದು ಬಿದ್ದೋ ನೆಲೆ ನಿಲ್ಲಿಸುವ ಗುರುತ್ವಾಕರ್ಷಣ ಶಕ್ತಿ ಈ ಹೊತ್ತಿನ ತತ್ವದ ಮಹಾ ಲೆವೆಲ್ಲರ್ ಆಗಿಬಿಡುತ್ತದೆ.



# ಸ್ಫೂರ್ತಿ



–ಸವಿತಾ ರವಿಶಂಕರ್, ನಾರ್ತ್ ಕೆರೋಲಿನ

ಮಾಯದಂತಾ ಮಂದಿ ಇವರಣ್ಣಾ
''ಸ್ಫೂರ್ತಿ'' ತಂಡದಾ ಮಾಯದಂತಾ ಮಂದಿ ಇವರಣ್ಣಾ..,

ಉಷವ್ವನ ಸಾರಥ್ಯದಲ್ಲಿ, ರಾಮಪ್ಪನವರ ನೇತೃತ್ವದಲ್ಲಿ
ಕನ್ನಡ ಮಾತೆಯ ತೇರನ್ನೆಳೆದ್ಯಾರೋ ''ಬೃಂದಾವನ''ದಲ್ಲಿ
ಮಾಯದಂತಾ ಮಂದಿ ಇವರಣ್ಣಾ ''ಸ್ಫೂರ್ತಿ'' ತಂಡದಾ
ಮಾಯದಂತಾ ಮಂದಿ ಇವರಣ್ಣಾ..,

ಖರ್ಚು ವೆಚ್ಚ ತೂಗಿಸಿಕೊಂಡು ಅಚ್ಚುಕಟ್ಟಾಗಿ ನಿಭಾಯಿಸಿಕೊಂಡು
ಕಾಂತಪ್ಪ, ಸೀಮವ್ವ ಕಾಂಚಾಣಾ ಝುಣಿಸ್ಯಾರೋ ''ಬೃಂದಾವನ''ದಲ್ಲಿ
ಮಾಯದಂತಾ ಮಂದಿ ಇವರಣ್ಣಾ ''ಸ್ಫೂರ್ತಿ'' ತಂಡದಾ
ಮಾಯದಂತಾ ಮಂದಿ ಇವರಣ್ಣಾ..,

ಕಂಸಾಳೆ ಕೋಲಾಟ ನಾಟಕ ವೇಷ ಸಿಂಹಾದ್ರಪ್ಪನ ಕಲಾ ವಿಶೇಷ
ಮಂದೀ ನಲಿಯೂತ ಚಪ್ಪಾಳೆ ತಟ್ಯಾರೋ ''ಬೃಂದಾವನ''ದಲ್ಲಿ
ಮಾಯದಂತಾ ಮಂದಿ ಇವರಣ್ಣಾ ''ಸ್ಫೂರ್ತಿ'' ತಂಡದಾ
ಮಾಯದಂತಾ ಮಂದಿ ಇವರಣ್ಣಾ..,


ಬುದ್ಧಿ ಮಾತ ಹೇಳಿಕೊಂಡು ನೀತಿ ವಿಚಾರ ತಿಳಿಸಿಕೊಂಡು
ರಾಘಣ್ಣ ಮರ್ಲಿನ್ನು ಸಂತೋಷ ನಿಂದಾರೋ ''ಬೃಂದಾವನ''ದಲ್ಲಿ
ಮಾಯದಂತಾ ಮಂದಿ ಇವರಣ್ಣಾ ''ಸ್ಫೂರ್ತಿ'' ತಂಡದಾ
ಮಾಯದಂತಾ ಮಂದಿ ಇವರಣ್ಣಾ..,

ಮಧುರಂಗಯ್ಯನ ದಕ್ಷತೆಯಲ್ಲಿ, ಸಾಧನವ್ವನಾ ಉಪಚಾರದಲ್ಲಿ
''ಸುಮಧುರ ಸ್ನೇಹ ಸಮ್ಮಿಲನ'' ಕಂಡ್ಯಾರೋ ''ಬೃಂದಾವನ''ದಲ್ಲಿ
ಮಾಯದಂತಾ ಮಂದಿ ಇವರಣ್ಣಾ ''ಸ್ಫೂರ್ತಿ'' ತಂಡದಾ
ಮಾಯದಂತಾ ಮಂದಿ ಇವರಣ್ಣಾ..,

ದಾನ ಧರ್ಮಗಳ ರೂಢಿಸಿಕೊಂಡು, ಸತ್ಕಾರ್ಯಗಳಲ್ಲಿ ತೊಡಗಿಸಿಕೊಂಡು
''ವಿಶ್ವಸಮ್ಮೇಳನ''ಕೆ ಟೊಂಕವಾ ಕಟ್ಯಾರೋ ''ಬೃಂದಾವನ''ದಲ್ಲಿ
ಮಾಯದಂತಾ ಮಂದಿ ಇವರಣ್ಣಾ ''ಸ್ಫೂರ್ತಿ'' ತಂಡದಾ
ಮಾಯದಂತಾ ಮಂದಿ ಇವರಣ್ಣಾ..,

# ಬೃಂದಾವನ-ನನ್ನ ಅನಿಸಿಕೆಗಳು

ಸಿಂಹಾದ್ರಿ ಸಂತೆಬೆನ್ನೂರ್



ನ್ಯೂಜೆರ್ಸಿಯಲ್ಲಿ ಬೃಂದಾವನದ ಸ್ಥಾಪನೆಯಾಗಿ ಐದು ವರ್ಷಗಳ ನಂತರ ಹಿಂದಿರುಗಿ ನೋಡಿದಾಗ ನನಗನಿಸಿದ್ದನ್ನು ಕೆಳಕಂಡಂತೆ ದಾಖಲಿಸಿದ್ದೇನೆ. ಒಂದು ಕನ್ನಡ ಸಂಘ ನ್ಯೂಜೆರ್ಸಿಯಲ್ಲಿ ಬದುಕಿ ಬೆಳೆಯುತ್ತದೆಯೇ ಎಂಬ ಬಗ್ಗೆ ಗುಮಾನಿಯಿದ್ದರೂ, ಅದನ್ನು ಪ್ರಾರಂಭಿಸಿದ ಸಾಹಸ ಫಲ ಕೊಟ್ಟಿರುವುದು ಇಂದು ನಮಗೆಲ್ಲಾ ಕಾಣುತ್ತಿದೆ.

ಮೊದಲಿಗೆ ನ್ಯೂಜೆರ್ಸಿಗೊಂದು  ಪ್ರತ್ಯೇಕ ಕನ್ನಡ ಸಂಘದ ಅವಶ್ಯಕತೆ ಏಕೆ ಎಂಬುದನ್ನು ವಿಚಾರ ಮಾಡೋಣ. ಕನ್ನಡಿಗರ ಸಂಖ್ಯೆ ನ್ಯೂಜರ್ಸಿ ಯಲ್ಲಿ ಕಳೆದ 10 ವರ್ಷಗಳಿಂದ ಬಹಳಷ್ಟು ಬೆಳದಿದೆ. ಅಲ್ಲದೆ ಎಲ್ಲಾ ಕನ್ನಡ ಕಾರ್ಯಕ್ರಮಗಳಿಗೆ ನ್ಯೂ ಯಾರ್ಕ್ ತನಕ ಹೋಗಿ ಬರುವುದೇ ಒಂದು ದೊಡ್ಡ ಸವಾಲು ಎಂದನಿಸಿದಾಗ ನ್ಯೂಜರ್ಸಿಗೆ ಒಂದು ಕನ್ನಡ ಸಂಘದ ಅವಶ್ಯಕತೆ ಕಂಡುಬಂತು. ಹಲವಾರು ಕನ್ನಡ ಪ್ರೇಮಿಗಳಿಂದ  ಬೃಂದಾವನದ ಸ್ಥಾಪನೆಯಾಯಿತು.

ಬೃಂದಾವನದ ಗುರಿಯಂತೆ ಕನ್ನಡ ಭಾಷೆ ಹಾಗೂ ಕರ್ನಾಟಕದ ಸಂಸ್ಕೃತಿಯ ಬಗ್ಗೆ ಮುಂದಿನ ಪೀಳಿಗೆಗೆ ತಿಳುವಳಿಕೆಯನ್ನು ತುಂಬುತ್ತಿರುವುದು ನನಗೆ ಬಹಳ ತೃಪ್ತಿ ನೀಡುತ್ತಿದೆ. ಶ್ರದ್ಧೆಯಿಂದ,  ನಿಸ್ವಾರ್ಥತೆಯಿಂದ, ಸಂತೋಷ, ಉಲ್ಲಾಸದಿಂದ, ಎಲ್ಲರೂ ಒಂದುಗೂಡಿ ಒಮ್ಮನಸ್ಸಿನಿಂದ ಕೆಲಸ ಮಾಡಿದಾಗ ಖಂಡಿತ ಒಂದು ಸಂಸ್ಥೆ ತಾನಾಗೇ ಅಭಿವೃದ್ಧಿ ಹೊಂದುವುದರಲ್ಲಾಗಲೀ ಅಥವಾ ಬೆಳೆಯುವುದರಲ್ಲಾಗಲೀ ಸಂದೇಹವೇ ಇಲ್ಲ.ಇದಕ್ಕೆ ನಮ್ಮ ಬೃಂದಾವನವೇ ಸಾಕ್ಷಿ.

ಮಿಕ್ಕಂತೆ ಬೃಂದಾವನ ಇನ್ನೂ ಎತ್ತರಕ್ಕೆ ಬೆಳೆಯಲು, ಕರ್ನಾಟಕದ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಕಾರ್ಯಕ್ರಮಗಳನ್ನು ನಡೆಸಬೇಕು ಎಂಬುದೇ ನನ್ನ ಸಲಹೆ. ಬೃಂದಾವನದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶ ಕೊಟ್ಟಾಗ, ಸದಸ್ಯರ ಸಂಖ್ಯೆಯೂ ಕ್ರಮೇಣ ಬೆಳೆಯುವುದರಲ್ಲಿ ಸಂಶಯವೇ ಇಲ್ಲ.

ನಾವು ಅಮೆರಿಕದಲ್ಲಿ ಕನ್ನಡತನವನ್ನು ಬರೀ ಸಂಘಗಳಲ್ಲಿ ಉಳಿಸಿಕೊಂಡರೆ ಸಾಲದು. ಮನೆಯಲ್ಲಿ ತಂದೆ ತಾಯಂದಿರು ತಮ್ಮ ಮಕ್ಕಳ ಜೊತೆ ಕನ್ನಡದಲ್ಲೇ ಮಾತನಾಡಿ ಹಾಗೂ ಆ ಮಕ್ಕಳಿಂದ ಕನ್ನಡದಲ್ಲೇ ಉತ್ತರವನ್ನು ಪಡೆದಾಗ ಕನ್ನಡ ಭಾಷೆಯ ಸ್ಥಾನವು ಅಮೆರಿಕದಲ್ಲಿಯೂ ಉನ್ನತ ಮಟ್ಟಕ್ಕೆ ಏರುವುದರಲ್ಲಿ ಸಂಶಯವಿಲ್ಲ. ನಾವು ಕನ್ನಡತನವನ್ನು ಉಳಿಸಿಕೊಳ್ಳಲು ಇದೇ ದಾರಿ.

ಸಿರಿಗನ್ನಡಂ ಗೆಲ್ಗೆ! ಸಿರಿಗನ್ನಡಂ ಬಾಳ್ಗೆ!!! ಜೈ ಕರ್ನಾಟಕ ಮಾತೆ !!! ಜೈ ಹಿಂದ್....!

# ನಮ್ಮ ಬೃಂದಾವನ



ಶ್ರೀಧರ್ ಹಾಗಲವಾಡಿ

ನನಗೂ ಹಾಗೂ ಬೃಂದಾವನ ಕನ್ನಡ ಸಾಂಸ್ಕೃತಿಕ ಕೂಟಕ್ಕೂ 3 ವರ್ಷಗಳ ಪರಿಚಯ.  ನಾನು ಆಗಸ್ಟ್‌ನಲ್ಲಿ ಅಮೇರಿಕಾಕ್ಕೆ ಬಂದೆ. ಬೆಂಗಳೂರಿನಲ್ಲಿ ಕನ್ನಡ ರಂಗ ಭೂಮಿ, ದೂರದರ್ಶನ, ಬೀದಿನಾಟಕ ಹಾಗೂ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ನನಗೆ ಇಲ್ಲಿಗೆ ಬಂದ ಹೊಸದರಲ್ಲಿ ಆ ಕಾರ್ಯಕ್ರಮಗಳೆಲ್ಲಾ ನಿಂತು, ಇಲ್ಲಿನ ಯಾಂತ್ರಿಕ ಜೀವನ ಬೇಸರವಾಗಿತ್ತು . ಆಗ ಎಡಿಸನ್‌ನಲ್ಲಿ ದಿನಸಿ ಹಾಗೂ ತರಕಾರಿ ಖರೀದಿಸುತ್ತಿದ್ದಾಗ ಕನ್ನಡ ಮಾತನಾಡುತ್ತಿದ್ದವರೊಬ್ಬರ ಪರಿಚಯ ಆಗಿ ಅವರು ಕನ್ನಡ ಸಿನೆಮಾ ಪ್ರದರ್ಶನದ ಬಗ್ಗೆ ತಿಳಿಸಿದರು. ಆ ಸಿನೆಮಾ ನೋಡಲು ಹೋದ ನನಗೆ, ಅಲ್ಲಿಗೆ ಬಂದಿದ್ದ ಕನ್ನಡಿಗರನ್ನು ಕಂಡು ಬಹಳ ಖುಶಿ ಆಯ್ತು. ಸಿನೆಮಾ ಮುಗಿದ ನಂತರ ಕೆಲವರನ್ನು ಪರಿಚಯ ಮಾಡಿಕೊಂಡೆ. ಅವರು ನಮ್ಮನ್ನು ಬೃಂದಾವನಕ್ಕೆ ಅಹ್ವಾನಿಸಿದರು. ಅಲ್ಲಿಂದ ಶುರುವಾಯ್ತು, ಕನ್ನಡದ ಸುಗ್ಗಿ ಹಬ್ಬ, ವಸಂತ ಹಬ್ಬ, ಯುಗಾದಿ, ಗಣೇಶೋತ್ಸವ, ವಾರ್ಷಿಕೋತ್ಸವ,  ವನ ವಿಹಾರ.

ಬೃಂದಾವನ ಕನ್ನಡ ಸಾಂಸ್ಕೃತಿಕ ಕೇಂದ್ರ. ಅಮೆರಿಕಾದ ನ್ಯೂ ಜೆರ್ಸಿಯಲ್ಲಿರುವ ಕನ್ನಡಿಗರಿಗೆ ಕನ್ನಡ ಸಾಂಸ್ಕೃತಿಕ ಕಲೆಗಳ ಹಬ್ಬದೂಟ ಬಡಿಸುತ್ತಿರುವ ಬೆಂಗಳೂರಿನ ಹಳ್ಳಿಮನೆ, ನಳಪಾಕ, ಕಾಮತ್ ಯಾತ್ರಿನಿವಾಸ, ವಿದ್ಯಾರ್ಥಿ ಭವನ ಇದ್ದ ಹಾಗೆ. ಅದಕ್ಕೆ ನಿದರ್ಶನ ಈ ವರ್ಷ ಬೃಂದಾವನ ನಡೆಸುತ್ತಿರುವ ವಿಶ್ವ ಕನ್ನಡ ಸಮ್ಮೇಳನ. ಈ ಸಂಸ್ಥೆ ಶುರು ಆಗಿ 5 ವರ್ಷಗಳಲ್ಲೇ ವಿಶ್ವ ಕನ್ನಡ ಸಮ್ಮೇಳನ ನಡೆಸುವ ಜವಾಬ್ದಾರಿ ಹೊತ್ತಿರುವುದು, ಈ ಸಂಸ್ಥೆಯ ಕಾರ್ಯವೈಖರಿಗೆ ದೊರೆತ ವಜ್ರ ಕಿರೀಟ. ವಿಶ್ವ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಲಿ, ಅದಕ್ಕೆ ನಿಮ್ಮೆಲ್ಲರ ಸಹಕಾರವಿರಲೆಂದು ಆಶಿಸುತ್ತೇನೆ.

ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ
ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು.

# ಬೃಂದಾವನ ನನ್ನ ತವರು



ವಿದ್ಯಾ

ಬೃಂದಾವನ.....ನನ್ನಮ್ಮೆ ಮನಗಳನ್ನ ಪುಳಕಿತಗೊಳಿಸೋ ಹೆಸರು! ನನಗೂ ಬೃಂದಾವನಕ್ಕೂ ಅದೆಂತಹ ನಂಟು? ಬಹುಶಃ ಬೃಂದಾವನ ನನ್ನ ತವರೆಂದರೆ ತಪ್ಪಾಗಲಾರದು! ಇದೇನಪ್ಪಾ ಬೃಂದಾವನ ಕೇವಲ ಐದೇ ವರ್ಷದ ಹಸುಗೂಸು, ಇವಳಿಗೆ ಮಾತ್ರ ತವರಾಗೋದಕ್ಕೆ ಹೇಗೆ ಸಾಧ್ಯ? ಈ ಪ್ರಶ್ನೆ ಎಲ್ಲಾ ಓದುಗರಲ್ಲಿ ಉದ್ಭವಿಸಿರುವುದಂತೂ ನಿಜ. ಬಹುಶಃ ನನಗೆ ಕನ್ನಡದ ಮೇಲಿರುವ ಅಭಿಮಾನವೇ ಮೂಲ ಕಾರಣವಿರಬೇಕು, ಬೃಂದಾವನ ನನ್ನ ತವರೆನ್ನಲು.

ನಾನು 1994ರಲ್ಲಿ ನನ್ನ ತಾಯಿ ಹಾಗೂ ನನ್ನ ಇಬ್ಬರು ಸಹೋದರಿಯರನ್ನು ಬಿಟ್ಟು ಶ್ರೀನಿಧಿಯ ಪತ್ನಿಯಾಗಿ ಭಾರತದಿಂದ ಸಾವಿರಾರು ಮೈಲಿ ದೂರದಲ್ಲಿರುವ ನ್ಯೂಜೆರ್ಸಿಗೆ ಬಂದು ನೆಲೆಸಿದೆ. ನಾನೊಬ್ಬ ಸಾಧಾರಣ ಮಧ್ಯಮ ವರ್ಗದ ಕುಟುಂಬದಿಂದ ಬಂದ ಹೆಣ್ಣು. ಎಲ್ಲಾ ಮಧ್ಯಮ ವರ್ಗದ ಹೆಣ್ಣುಮಕ್ಕಳ ತರಹ ನನಗೂ ಅಮೆರಿಕ ಕನಸಿನ ತಾಣವಾಗಿತ್ತು, ಎಲ್ಲದರಲ್ಲೂ ಹೊಸತನ ಕಾಣುತ್ತಿತ್ತು. ಆದರೆ ಬೆಂಗಳೂರಂತಾ ಮಹಾನಗರದಿಂದ ಬಂದ ನನಗೆ ಇಲ್ಲಿನ ಭಾಷೆ, ವೇಷ, ಭೂಷಣಕ್ಕೆಹೊಂದಿಕೊಳ್ಳುವುದು ಅಷ್ಟೇನೂ ಕಷ್ಟವೆನಿಸಲಿಲ್ಲ.

ಹೊಸದರಲ್ಲಿ ಅಗಸ ಗೋಣೀನ ಎತ್ತೆತ್ತಿ ಒಗೆದ ಅನ್ನೋಹಾಗೆ, ಹೊಸದರಲ್ಲಿ ಊರು ಸುತ್ತಿದ್ದೂ ಸುತ್ತಿದ್ದೆ, ನೋಡಿದ್ದೂ ನೋಡಿದ್ದೇ. ಎಲ್ಲಾ ಮುಗಿದ ಮೇಲೆ ವಾಸ್ತವಕ್ಕೆ ಬರಲೇ ಬೇಕಲ್ಲಾ? ಬರಬರುತ್ತಾ ಜೀವನ ಬಹಳ ಯಾಂತ್ರಿಕ ಅನ್ನಿಸ್ತಿತ್ತು. ಹಾಗೂ ಹೀಗೂ ಜೀವನದ ಏರಿಳಿತಗಳ ಮಧ್ಯೆ ನಾನು ನನ್ನ ಪತಿರಾಯರು 8 ವರ್ಷಗಳು ಕಳೆದಿದ್ದೆವು. ನಮ್ಮ ಸುಖ ದಾಂಪತ್ಯದ ಫಲಿತಾಂಶವೇ ನಮ್ಮ ಎರಡು ಪುಟಾಣಿಗಳು ನೂಪುರ್ ಮತ್ತು ವರ್ಷ. ಮಕ್ಕಳಿಗೆ 4–5 ವರ್ಷಗಳು ತುಂಬುತ್ತಲೇ ಶುರುವಾಗತ್ತಲ್ಲ...ಹಾಡು, ಹಸೆ, ಕರಾಟೆ, ಸ್ವಿಮ್ಮಿಂಗ್, ಕುಮಾನ್, ಹಾಳು, ಮೂಳು......ಎಲ್ರೂ ಮಾಡೋ ಹಾಗೆ ನಾನೂ ಮಾಡುತ್ತಿದ್ದೆ. ಮಕ್ಕಳ ಆಟ ಪಾಟಗಳಲ್ಲಿ ನನ್ನನ್ನು ನಾನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದೆ. ಜೀವನ ಯಾವುದೇ ಅಡೆ ತಡೆಗಳಿಲ್ಲದೆ ನಡೆಯುತ್ತಿತ್ತು. ನನ್ನವರು ನನ್ನನ್ನು ನಡೆಸುತ್ತಿದ್ದುದು ಹೂವಿನ ಹಾಸಿಗೆಯ ಮೇಲೆ (ಈಗಲೂ). ಇಷ್ಟೆಲ್ಲಾ ಇದ್ದರೂ ಅದೇನೋ ಕೊರತೆ ನನ್ನನ್ನು ಕಾಡುತ್ತಲೇ ಇತ್ತು. ನಮ್ಮ ಭಾಷೆ, ನಮ್ಮ ಸಂಸ್ಕೃತಿಯಿಂದ ನಾವು ದೂರ ಆಗ್ತಿದ್ದೀವೇನೋ ಅನ್ನಿಸ್ತಿತ್ತು.

ನನ್ನ ಮಾತೃ ಭಾಷೆ ತಮಿಳಾದರೂ ನಾನು ಕಲಿತಿದ್ದೆಲ್ಲಾ ಕನ್ನಡದಲ್ಲೇ. ಮನೇಲಿ ನಾನು ನನ್ನ ಯಜಮಾನರು ಮಾತನಾಡೋದೂ ಕನ್ನಡದಲ್ಲೇ. ಹೀಗಾಗಿ ನಾನು ನೂರಕ್ಕೆ ನೂರರಷ್ಟು ಕನ್ನಡತಿ ಅಂದುಕೊಳ್ಳಕ್ಕೆ ನನಗೆ ತುಂಬಾ ಹೆಮ್ಮೆ. ಎಷ್ಟೋ ಒಳ್ಳೊಳ್ಳೆ ಸ್ನೇಹಿತರು ನನಗಿದ್ರೂ ನನ್ನ ಅತಿಯಾದ ಒಲವು ಕನ್ನಡದ ಮೇಲೆ, ಕನ್ನಡಿಗರ ಮೇಲೆ. ಹೀಗೇ ನನ್ನ ಮನಸ್ಸು ಕನ್ನಡದವರನ್ನ ಅರಸಿ ಹೋದಾಗ ನನಗೆ ಸಿಕ್ಕ ಆಪ್ತ ಗೆಳತಿ ಸೀಮಾ, ಸೀಮಾ ಮೂರ್ತಿ. ಅವಳು ನನ್ನ ಪಾಲಿಗೆ ಮರಳುಗಾಡಿನಲ್ಲಿ ಸಿಕ್ಕ ''ಓಯಸಿಸ್''. ನನ್ನ ಕನ್ನಡದ ದಾಹಕ್ಕೆ ನೀರಾಗಿ ಬಂದವರೇ ಮೂರ್ತಿ ದಂಪತಿಗಳು. ಕಾಕತಾಳೀಯವೆಂದರೆ ನನ್ನ ಕಡೆಯ ಹೆಸರೂ ಮೂರ್ತೀನೇ. ಬರ್ತಾ ಬರ್ತಾ ನಾವು ಒಂದೇ ಕುಟುಂಬದವರ ಹಾಗೆ ಆಗ್ಬಿಟ್ವಿ. ಹೀಗೇ ಕೆಲವು ತಿಂಗಳು ಕಳೆದ್ವಿ, ಒಂದು ದಿನ ಸೀಮ ಹಾಗೂ ವಿಜಯ್ ಮೂರ್ತಿ ನಮ್ಮ ಹತ್ತಿರ ಬಂದು ಬೃಂದಾವನ ಅಂತ ಒಂದು ಕನ್ನಡ ಸಂಘಾನ ಪ್ರಾರಂಭ ಮಾಡ್ತಾ ಇದ್ದೀವಿ, ಅದರ ಉದ್ಘಾಟನೆ ಡಿಸೆಂಬರ್ 5ನೇ ತಾರೀಖು ಇದೆ, ನಿಮಗೆ ಇಷ್ಟ ಇದ್ರೆ ಇದಕ್ಕೆ ನೀವು ಮೆಂಬರ್ ಆಗಿ, ನಾವೆಲ್ಲಾ ಸೇರಿ ಒಂದು ಪ್ರೋಗ್ರಾಂ ನಡೆಸೋಣ ಅಂದ್ರು.

ಈ ಒಂದು ಸಂದರ್ಭಕ್ಕೆ ನಾನು ಕಾದ ದಿನಗಳೆಷ್ಟೋ? ನಮ್ಮ ನ್ಯೂಜೆರ್ಸಿಯಲ್ಲಿ ಒಂದು ಕನ್ನಡ ಸಂಘ ಇದ್ರೆ ಅದೆಷ್ಟು ಚೆನ್ನಾಗಿರ್ತಿತ್ತು ಅಂತ ನಾನೆಷ್ಟು ಸಲ ಅಂದುಕೊಂಡಿಲ್ಲ?

ಆಕಸ್ಮಿಕವಾಗಿ ಬಂದ ಈ ಸಂದೇಶ ಕೇಳಿದಾಗ ನನ್ನ ಕಿವಿಗಳನ್ನೇ ನನಗೆ ನಂಬಲಾಗಲಿಲ್ಲ. ಒಂದು ಕ್ಷಣವೂ ತಡಮಾಡದೆ ನಾನು ಬೃಂದಾವನದ ಸದಸ್ಯೆಯಾದೆ. ಈ ನನ್ನ ಹಂಬಲ ಮತ್ತು ಕನಸನ್ನು ನನಸು ಮಾಡಿದ ಕಾಣದ ಆ ದೇವರಿಗೆ ನನ್ನ ಮನದಾಳದಿಂದ ವಂದಿಸಿದೆ. ನನ್ನಲ್ಲೇನೋ ಹೊಸಚೈತನ್ಯ ಬಂದಂತೆ ಚಿಕ್ಕ ಮಕ್ಕಳಂತೆ ಕುಣಿಕುಣಿದಾಡಿದೆ. ನನ್ನ ಮನದಲ್ಲೇನೋ ಸಂತೋಷ, ಹೊಸ ಹುರುಪು, ತವರಿಗೆ ಹೋಗೋ ಸಂಭ್ರಮದ ಅನುಭವ. ಎಷ್ಟಾದರೂ ನಮ್ಮ ಭಾಷೆಯಲ್ಲವೇ ನಮ್ಮ ತಾಯಿ?

ತಾಯಿನ ನೋಡೋದಕ್ಕೆ ತಡವೇಕೆ? ಆಗ್ಲೇ ಶುರುವಾಯ್ತು ನಮ್ಮ ತಯಾರಿ. ಮಕ್ಕಳ ಹತ್ರ ಕರ್ನಾಟಕದ ಹಬ್ಬಗಳು ಅನ್ನೋ ಒಂದು ಕಾರ್ಯಕ್ರಮ, ಹಾಗೂ ಕರ್ನಾಟಕ ನಡೆದು ಬಂದ ದಾರಿ ಅನ್ನೋ ಒಂದೈದು ನಿಮಿಷದ ವಿವರಣೆ. ಹೀಗೆ ನಿಶ್ಚಯ ಮಾಡಿ ಒಂದೆರೆಡು ದಿನಗಳಲ್ಲಿ ಪ್ರ್ಯಾಕ್ಟೀಸ್ ಶುರೂನು ಮಾಡಿದ್ವಿ. ಈ ಹೊಸ ಸಂಭ್ರಮದಲ್ಲಿ ದಿನಗಳು ಉರುಳಿದ್ದೇ ತಿಳಿಯಲಿಲ್ಲ. ಕಡೆಗೂ ಬಂದೇ ಬಂತು ಆ ಶುಭ ದಿನ, ನಮ್ಮೆಲ್ಲರ ಕನಸು ಕೈಗೂಡುವ ದಿನ. ಎಲ್ಲರೂ ಬೆಳಿಗ್ಗೆ ಬೇಗನೆ  ಎದ್ದು ಸ್ನಾನ,ಸಂಧ್ಯಾವಂದನೆಗಳನ್ನು ಮುಗಿಸಿ, ವಿಶೇಷವಾಗಿ ಅಲಂಕರಿಸಿಕೊಂಡು ಬ್ರಿಜ್ ವಾಟರ್ ಸಭಾಂಗಣದತ್ತ ಸವಾರಿ ಹೊರಟೆವು. ಅಬ್ಬಾ! ಅದೆಂತಾ ಸಂಭ್ರಮ! ಎಲ್ಲೆಲ್ಲೂ ಹಬ್ಬದ ವಾತಾವರಣ. ಇದೇ ನನ್ನ ಕಲ್ಪನೆಯ ತವರು ಎಂದು ನನ್ನ ಮನ ಮತ್ತೆ ಮತ್ತೆ ಕೂಗಿ ಹೇಳಿತು. ಎಲ್ಲೆಲ್ಲೂ ಇಂಪಾದ ಕನ್ನಡ ಕೇಳಿ ಬರುತ್ತಿತ್ತು. ಎಲ್ಲೆಲ್ಲೂ ನಗೆಯ ಹೊನಲು. ಕುಮಾರ್ ದಂಪತಿಗಳ ತುಂಬು ಹೃದಯದ ಸ್ವಾಗತ ನನ್ನ ಮನದಲ್ಲಿ ಇಂದಿಗೂ ಹಚ್ಚ ಹಸಿರಾಗಿ ನಿಂತಿದೆ.

ಎಲ್ಲರೂ ಬಂದ ಮೇಲೆ ಸಭೆ ಶುರುವಾಯಿತು. ಕಾರ್ಯಕ್ರಮಗಳಂತೂ ಒಂದಕ್ಕಿಂತ ಒಂದು ವಿಶೇಷವಾಗಿದ್ದವು. ಸಭಿಕರು ಕರತಾಡನದ ಮೂಲಕ ಪುಟ್ಟ ಮಕ್ಕಳನ್ನು ಪ್ರೋತ್ಸಾಹಿಸಿದರು. ನನ್ನ ಪುಟಾಣಿಗಳು ಮೊಟ್ಟ ಮೊದಲು ಏರಿದ್ದು ಬೃಂದಾವನದ ವೇದಿಕೆಯ ಮಡಿಲನ್ನು. ಈ ವೇದಿಕೆಯನ್ನು ಸೃಷ್ಟಿಸಲು ಶ್ರಮಿಸಿದ ರೂವಾರಿಗಳಿಗೆ ನನ್ನ ಹೃದಯದಾಳದಿಂದ ನಮಿಸಿದೆ. ಅಂದು ಕಡೆಯದಾಗಿ ಶ್ರೀಮತಿ ವಸಂತ ಶಶಿ ಅವರ ಕೋಗಿಲೆ ಕಂಠದಿಂದ ಬಂದ ಸಂಗೀತ ನನ್ನನ್ನು ಮಂತ್ರಮುಗ್ಧಳನ್ನಾಗಿ ಮಾಡಿತೆಂದರೆ ಅತಿಶಯೋಕ್ತಿಯೆನಿಸಲಾರದು. ಅನೇಕ ವರ್ಷಗಳ ನಂತರ ನಾವು ಕೇಳ ಬಯಸಿದ ವಿಶೇಷವಾದ ಹಳೆಯ ಕನ್ನಡದ ಹಾಡುಗಳನ್ನು ರಾಜೇಶ್ ಕೃಷ್ಣನ್  ಜೊತೆಯಲ್ಲಿ ಹಾಡಿದ್ದು ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚು ಮೆರಗು ಕೊಟ್ಟಿತ್ತು. ಒಟ್ಟಿನಲ್ಲಿ ಕಾರ್ಯಕ್ರಮ ಅತ್ಯಂತ ಅದ್ದೂರಿಯಿಂದ ನಡೆಯಿತೆನ್ನುವುದರಲ್ಲಿ ಸಂದೇಹವೇ ಇಲ್ಲ. ರಾತ್ರಿಯ ಭರ್ಜರಿ ಊಟ ಮುಗಿಸಿ, ಫಲ ತಾಂಬೂಲಪಡೆದು ಈ ಎಲ್ಲಾ ರಸನಿಮಿಷಗಳನ್ನು ಮೆಲುಕುಹಾಕುತ್ತಾ ನಮ್ಮ ಗೂಡಿಗೆ ನಡೆದೆವು. ಆ ರಾತ್ರಿಯಂತೂ ನನಗೆ ನಿದ್ದೆಯೇ ಬಾರದು. ಯಾವುದೋ ಹೊಸ ಚೈತನ್ಯ ಪಡೆದ ಅನುಭವ, ನನ್ನ ತಾಯಿ ನನ್ನನ್ನು ಬೀಳ್ಕೊಟ್ಟು ಮತ್ತೆ ಬಾ ಮಗಳೇ ಅಂದಂತೆ ನೆನಪು.

ಅಲ್ಲಿಂದ ಸತತವಾಗಿ ಎರಡು ವರ್ಷಗಳ ಕಾಲ ಶ್ರೀಮಾನ್ ಪ್ರಸನ್ನ ಕುಮಾರ್ ಅವರ ನೇತೃತ್ವದಲ್ಲಿ ಬೃಂದಾವನದ ಅಭಿವೃದ್ಧಿ ಮೇಲೇರುತ್ತಲೇ ಹೋಯಿತು. ನನ್ನೆರೆಡು ಮಕ್ಕಳು ಕನ್ನಡ ಮಾತನಾಡಲು ಪ್ರಾರಂಭಿಸಿದ್ದನ್ನು ನಾನಿಲ್ಲಿ ನೆನೆಸಲೇ ಬೇಕು. ಆ ಎರಡು ವರ್ಷಗಳಲ್ಲಿ ಉಷಾ ಹಾಗೂ ಪ್ರಸನ್ನ ಕುಮಾರ್ ನಮಗೆ ತೀರಾ ಅತ್ಮೀಯರಾದರು. ಕನ್ನಡಕ್ಕಾಗಿ ಅವರು ಮಾಡುತ್ತಿರುವ ನಿಸ್ವಾರ್ಥ ಸೇವೆ ನನ್ನನ್ನು ಅವರ ಅಭಿಮಾನಿಯನ್ನಾಗಿ ಮಾಡಿತೇನೋ?! ಎರಡು ವರ್ಷಗಳಲ್ಲಿ ನನ್ನ ಎರಡು ಮಕ್ಕಳಿಗೂ ಸಾಕಷ್ಟು ಕಾರ್ಯಕ್ರಮ ಮಾಡಲು ಉತ್ತೇಜಿಸಿದ ಕುಮಾರ್ ದಂಪತಿಗಳಿಗೆ ಹಾಗೂ ಅವರ ತಂಡಕ್ಕೆ ನನ್ನ ಅನಂತಾನಂತ ವಂದನೆಗಳು.

ತದನಂತರ ನಮ್ಮವರೇ ಆದ ಶ್ರೀಮತಿ ವಸಂತ ಶಶಿ ಅವರ ಅಧ್ಯಕ್ಷತೆಗೆ  ಬೃಂದಾವನದ ವೇದಿಕೆ ಮತ್ತೆ ಸಜ್ಜಾಯಿತು. ಅವರ ಸುಶ್ರಾವ್ಯ ಕಂಠ ಪ್ರತಿಯೊಬ್ಬ ಕನ್ನಡಿಗರ ಮನೆಮಾತಾಯಿತು. ಅನೇಕಾನೇಕ ಯಶಸ್ವೀ ಕಾರ್ಯಕ್ರಮಗಳ ತವರಾಯಿತು. ಅವರ ಸಾರಥ್ಯದಲ್ಲಿ ಬೃಂದಾವನದ ಪತಾಕೆ ಮತ್ತಷ್ಟು ಮೇಲೇರಿತು. ಶ್ರೀಮತಿ ವಸಂತಾ ಶಶಿ ನನ್ನ ಮಕ್ಕಳ ಜೊತೆಗೆ ನನ್ನನ್ನೂ ಪ್ರೋತ್ಸಾಹಿಸಿ ನನ್ನ ಅಳಿಲಸೇವೆಯನ್ನು ಗುರುತಿಸಿ ನನ್ನ ಬೆಳವಣಿಗೆಗೆ ಕಾರಣರಾದರೆನ್ನುವುದರಲ್ಲಿ ಸಂಶಯವೇ ಇಲ್ಲ. ಶ್ರೀಮತಿ ವಸಂತ ಶಶಿ ಹಾಗೂ ಅವರ ತಂಡಕ್ಕೆ ನಾನು ಚಿರಋಣಿ. ಅವರ ಮಧುರ ಕಂಠದ ಹಾಡುಗಳನ್ನು ಮುಂದಿನ ಸಾಲಿನಲ್ಲಿ ಕುಳಿತು ಕೇಳಿ ನನ್ನನ್ನೇ ನಾನು ಮರೆತಿರುವ ಸಂಧರ್ಭಗಳೂ ಹಲವು ಇವೆ. ಅವರ ಸಂಗೀತ ಸುಧೆಯ ಸವಿಯುಂಡ ನಾನೇ ಭಾಗ್ಯಶಾಲಿ.

ಇನ್ನು ಇತ್ತೀಚಿನ ವಿದ್ಯಮಾನಗಳ  ಕಡೆ ಗಮನ ಹರಿಸೋಣ. ಈಗ ಬೃಂದಾವನಕ್ಕೆ ಮತ್ತೆ ನೀರೆರೆದು ಪೋಷಿಸಲು ನನ್ನ  ಗೆಳತಿ ಉಷಾ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿರುವುದು ಅತೀವ ಸಂತೋಷದ ವಿಷಯ. ಉಷಾ ಬೃಂದಾವನದ ಚರಿತ್ರೆಯ ಪುಟಗಳಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ. ತನ್ನ ಸ್ಪೂರ್ತಿ ತಂಡದೊಂದಿಗೆ ಬೃಂದಾವನವನ್ನು ಇಮ್ಮಡಿ, ಮುಮ್ಮಡಿ, ನೂರ್ಮಡಿಯಾಗಿ ಬೆಳೆಸುವ ಸದುದ್ದೇಶದಿಂದ ಇಟ್ಟ ದಿಟ್ಟ ಹೆಜ್ಜೆಯ ಫಲಿತಾಂಷವೇ ನ್ಯೂಜೆರ್ಸಿಯ ಅಕ್ಕಸಮ್ಮೇಳನ. ''ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು'' ಎಂಬ ಗಾದೆಗೆ

ಬೃಂದಾವನ ಜೀವಂತ ಉದಾಹರಣೆಯಾಗಿದೆ. ಬೃಂದಾವನದಂತಹ ಒಂದು ಪುಟ್ಟ ಸಂಸ್ಥೆ ಅಕ್ಕದಂತಹ ಬೃಹದಾಕಾರದ ವಿಶ್ವಕನ್ನಡ ಸಮ್ಮೇಳನವನ್ನು ನಡೆಸಲು ಕಂಕಣ ತೊಟ್ಟಿರುವ ಉಷಾ ಹಾಗೂ ಸ್ಪೂರ್ತಿ ತಂಡದ ಆತ್ಮಸ್ಥೈರ್ಯವನ್ನು ನಾವಿಲ್ಲಿ ಮೆಚ್ಚಲೇಬೇಕು.

ಅಕ್ಕ ಸಮ್ಮೇಳನ ಯಶಸ್ವಿಯಾಗಲು ಬೃಂದಾವನಕ್ಕೆ ಸಹಾಯ ಹಸ್ತ ನೀಡಿರುವ ನಮ್ಮ ನೆರೆ ರಾಜ್ಯಗಳಾದ ನ್ಯೂಯಾರ್ಕ್, ಡೆಲೆವೇರ್, ಪೆನ್ನಿಲ್ವೇನಿಯಾ ಹಾಗೂ ಕನೆಕ್ಟಿಕಟ್ಟಿನ ಕನ್ನಡ ಬಾಂಧವರ ಉದಾರತೆ ನಿಜಕ್ಕೂ ಶ್ಲಾಘನೀಯ. ''ಒಗ್ಗಟ್ಟಿನಲ್ಲಿ ಬಲವಿದೆ'' ಎಂಬುದನ್ನು ಎತ್ತಿ ತೋರಿಸಲು ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ? ನಮ್ಮ ತವರು ಬೃಂದಾವನ ಈಗ ಅನೇಕ ಕನ್ನಡಿಗರ ಮನ ಮನೆಗಳಲ್ಲಿ ಸೇರಿಹೋಗಿದ್ದಾಳೆ. ವಿಶ್ವದ ಅನೇಕ ಕಲಾವಿದರನ್ನು, ಪ್ರತಿಭಾನ್ವಿತರನ್ನು ತನ್ನ ಮಡಿಲಿನಲ್ಲಿ ಆಡಿಸಲು ಕೈ ಬೀಸಿ ಕರೆಯುತ್ತಿದ್ದಾಳೆ. ಸಹಸ್ರಾರು ಕನ್ನಡಿಗರನ್ನು ನಾವು ನಮ್ಮ ತವರಿಗೆ ಆಹ್ವಾನಿಸುವುದರಲ್ಲಿ ಅದೆಂತಹ ಸುಖ? ಬೃಂದಾವನದ ಆಶ್ರಯದಲ್ಲಿ ನಡೆಯುವ ವಿಶ್ವ ಕನ್ನಡ ಸಮ್ಮೇಳನಕ್ಕೆ ಬನ್ನಿ ನಾವೆಲ್ಲ ಒಂದಾಗಿ ಶ್ರಮಿಸೋಣ. ನಮ್ಮ ತವರಿನ ತೇರನ್ನೆಳೆಯೋಣ.

ಬೃಂದಾವನ ಎಷ್ಟೋ ಎಲೆಮರೆಕಾಯಿಯಂತಿರುವ ಪ್ರತಿಭಾನ್ವಿತರನ್ನು ಹೆಕ್ಕಿತೆಗೆದು ತನ್ನ ಮಡಿಲಿನಲ್ಲಿ ಬೆಳೆಸಿದ್ದಾಳೆ. ಅವಳ ಒಡನಾಟದಲ್ಲಿ ನಾನು ಎಷ್ಟೋ ನನ್ನ ಒಡಹುಟ್ಟದ ಸೋದರ,ಸೋದರಿಯರನ್ನು ಗಳಿಸಿದ್ದೇನೆ. ಇಷ್ಟೆಲ್ಲಾ ಪಡೆದ ನಾನು ಬೃಂದಾವನವನ್ನು ತವರೆನ್ನದೆ ಮತ್ತೇನೆಂದು ಕರೆಯಲಿ? ಬೃಂದಾವನ ಮಹಾ ಕಲ್ಪವೃಕ್ಷವಾಗಿ ಬೆಳೆದು,ಅವಳ ಮಡಿಲಲ್ಲಿ ಸಹಸ್ರಾರು ಕನ್ನಡಿಗರು ಬೆಳೆಯಲಿ.ಈ ತವರಿಗೆ ಮುಪ್ಪಿಲ್ಲ. ಈ ತವರಿನ ದೀಪ ಎಂದೆಂದಿಗೂ ನಂದಾದೀಪವಾಗಿರಲಿ ಎಂದು ಹಾರೈಸುವ.

ಅವಳ ಮನೆ ಮಗಳು
ವಿದ್ಯಾ ಮೂರ್ತಿ

VANAVANI 5th Anniversary Celebration

# ಸಂಗೀತದ ರಸಗವಳ
















# Past Events

# ಸಂಗೀತದ ರಸಗವಳ

















KCOB Pictures

# ನ ಧೀಂ ಧೀಂತನಾ...














# Past Events

# ಲೈಟ್ಸ್... ಕ್ಯಾಮೆರಾ... ಆಕ್ಷನ್...














## KCOB Pictures

VANAVANI 5th Anniversary Celebration

## ನಗಬೇಕು, ನಗಿಸಬೇಕು









## ಕುಳಿತು ಚೆಂದ ನೋಡಿದವರು...





# Past Events

# ಅಕ್ಕ 2008ರಲ್ಲಿ ಬೃಂದಾವನ













KCOB Pictures

ಚುಕ್ಕಿ ಇಟ್ಟು ಬಣ್ಣ ತುಂಬಿ ...





ಬದನೆಕಾಯಲು ಹೂವು ದುಂಬಿ!







# Past Events

# ಆಟ-ಗೀಟ ಆಡಿಕೊಂಡು ...














KCOB Pictures

## ಆಟ–ಗೀಟ ಆಡಿಕೊಂಡು ...













# Past Events

# ಆಟ–ಗೀಟ ಆಡಿಕೊಂಡು ...














# KCOB Pictures

# ಊಟ-ಗೀಟ ಮಾಡಿಕೊಂಡು ...













# Past Events

# ಮುದ್ದು ಮರಿ, ಚಿತ್ರ ಬರಿ











## KCOB Pictures

# ಪುಟ್ಟ ಪುಟ್ಟಿ ಚಿನ್ನು ಮಿನ್ನು...













# Past Events

# ಪುಟ್ಟ ಪುಟ್ಟಿ ಚಿನ್ನು ಮಿನ್ನು...












VANAVANI 5th Anniversary Celebration

KCOB Pictures

# ಗೆದ್ದೋರ್ಯಾರು?










# Past Events

# ಬೃಂದಾವನಕೆ ಬಂದವರಾರೆ...?

















## KCOB Pictures

# ಅವರ್ ಬಿಟ್ಟು ಇವರ್ ಬಿಟ್ ಇವರ್ಯಾರು?


















# Past Events

# ಬೃಂದಾವನ ಚಟುವಟಿಕೆಗಳು
















# ಬೃಂದಾವನ ಚಟುವಟಿಕೆಗಳು














# Past Events

# ಬೃಂದಾವನ ಚಟುವಟಿಕೆಗಳು








FOOD BANK

60 Millstone Road
PO Box 333 • Somerset, New Jersey 08875-0333
(732) 246-0009
www.franklinfoodbank.org

We gratefully acknowledge your contribution.

Date: 12/20/08 Donor: KCOB

Item(s) Received: ☑ 1315 pounds of food
☐ clothing items
☐ ______ other

Somerset County United Way Affiliated Agency

Agency Representative



## KCOB Pictures

Congratulations & Best Wishes To


**Brindavana Kannada Sangha**

# Association of Kannada Kootas of America (AKKA)

Bringing together the Kannadigas from USA & Canada

**www.akkaonline.org**

# *With Best Wishes to Brindavana*



## Madhu Rangaiah, Subhashini, Gowri and karthik

# With Best Wishes to Brindavana



## Shankar
## Sadhana
## Sweekrutha and Sukrutha

# With Best Wishes to Brindavana




## Santosh Kumar Kadlebele
## Smitha Santosh
## Prerana and Chaitanya Santosh

# With Best Wishes to Brindavana




## Harish Naidu
## Srilakshmi & Children

# With Best Wishes to Brindavana



## Raghu malini & Nidhi



## Simhadri Santebennur & Family

# Mary Kay Cosmetics



**Would you like a complimentary facial?
Like to have glowing skin?
Gift baskets for your loved ones?**

**CALL: Merlin Mendonca**

Independent Mary Kay Beauty Consultant
6 Deutsch Lane
Edison NJ 08820
732-855-8878 / 732-512-7670
merlinm@marykay.com
Visit my website: www.marykay.com/merlinm

# With Best Wishes to Brindavana



# *With Best Wishes to Brindavana*



Jewel of India
Bar and Restaurant

## VIJAY SHETTY
## JAYASHREE SHETTY
## VISHAL SHETTY

Jewel of India
Restaurant & Caterers

# With Best Wishes to Brindavana



**PRASANNA KUMAR**
**USHA PRASANNA KUMAR**
**SNEHA P KUMAR**
**SUHAS P KUMAR**

# *With Best Wishes to Brindavana*



## DR. SATHYA KALLUR
## &
## FAMILY

*"Happy 5th Birthday Brindavana - Many Many Happy Returns"*



**Seema, Vijay**
**Samhita and Vedrath**

# *With Best Wishes to Brindavana*



**Ben Kantharaju**
**Hema Kantharaju**
**Pavan Kantharaju**

# With Best Wishes to Brindavana



## Suresh Vasisht
## Meena Vasisht
## Ajay and Shubha Vasisht

Best wishes to all members of Brindavana , 2010



Providing quality care to the community over a decade

MEDICAL CARE ASSOCIATES, L.L.C.
1740 OAK TREE ROAD, EDISON, NJ 08820
732-494-5000 / 732-494-1445

Dr. Pulin Patel, M.D.
Primary Care/Internal Medicine

Dr. Ram Bangalore. M.D., F.C.C.P., F.A.C.P
Lung Specialist/Sleep Medicine Specialist

OFFICE HOURS:
MONDAY TO SATURDAY: 7:00AM TO 7:00PM
OPEN 6 DAYS A WEEK

DOCTORBANGALORE@AOL.COM

ALL MAJOR INSURANCES ACCEPTED

**The Living Balance Sheet®**




The Living Balance Sheet® and its team of more than 1,200 specialists are currently advising over 80,000 professionals on how to make the most of untapped potential. Using this revolutionary financial model, we can show you the big picture of your finances, both business and personal. Help you adjust your strategies for optimal impact across the board. And make sure you're maximizing your opportunities and the value of your business.

It's insight you won't find anywhere else.

**For more information, contact:**

Pambayan Meyyan
Forest Hills Financial Group
718-268-9255 Ext. 268
pambayan_meyyan@fhfg.com

Sridhar Rao
Forest Hills Financial Group
718-268-9255 Ext. 282
sridhar_rao@fhfg.com

Or visit us at www.thelivingbalancesheet.com

Forest Hills Financial Group is an authorized user of The Living Balance Sheet®. The Living Balance Sheet® and the Living Balance Sheet® Logo, are registered service marks of The Guardian Life Insurance Company of America (Guardian), New York, NY. The graphics and text used herein are the exclusive property of Guardian and protected under U.S. and International copyright laws. © Copyright 2005-2010, The Guardian Life Insurance Company of America.

GEAR 2009-11482